# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 150

ಉತ್ತರಿಸುವ ದಿನಾಂಕ : 10.07.2018.

ಸದಸ್ಯರ ಹೆಸರು : ಶ್ರೀ ಎಂ.ಎ ಗೋಪಾಲಸ್ವಾಮಿ (ವಿಧಾನ ಪರಿಷತ್ ಸದಸ್ಯರು)

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಯವರು

| ಕ್ರಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮಗಳ ಪೂರ್ಣ ವಿವರ ನೀಡುವುದು; ಈ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಖರ್ಚು ಮಾಡಿರುವ ಅನುದಾನವೆಷ್ಟು; (ತಾಲ್ಲೂಕುವಾರು ಮತ್ತು ಫಲಾನುಭವಿವಾರು ವಿವರ ನೀಡುವುದು) | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಿದೆ.<br>ಹಾಸನ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಇಲಾಖಾ ಕಾರ್ಯಕ್ರಮಗಳನ್ನು ಅನಷ್ಠಾನಗೊಳಿಸಲು ಖರ್ಚು ಮಾಡಿರುವ ಅನುದಾನದ ತಾಲ್ಲೂಕುವಾರು ಹಾಗೂ ಫಲಾನುಭವಿವಾರು ವಿವರಗಳನ್ನು ಅನುಬಂಧ–2(ಎ, ಬಿ, ಸಿ, ಡಿ & ಇ)ರಲ್ಲಿ ಒದಗಿಸಿದೆ. |
| ಆ | ಹಾಸನ ಜಿಲ್ಲೆಯಲ್ಲಿರುವ ಹೋಬಳಿ/ತಾಲ್ಲೂಕು/ಜಿಲ್ಲಾ ಕ್ರೀಡಾಂಗಣಗಳ ಪೂರ್ಣ ಮಾಹಿತಿ ನೀಡುವುದು; ಈ ಕ್ರೀಡಾಂಗಣಗಳ ಅಭಿವೃದ್ಧಿಗಾಗಿ ಇಲಾಖೆಯು ಕೈಗೊಂಡಿರುವ ಕ್ರಮಗಳೇನು; (ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಹೋಬಳಿ ಮಟ್ಟದಲ್ಲಿ ಇಲಾಖಾ ಕ್ರೀಡಾಂಗಣಗಳು ಇರುವುದಿಲ್ಲ.<br>ಹಾಸನ ಜಿಲ್ಲೆಯಲ್ಲಿರುವ ವಿವಿಧ ಕ್ರೀಡಾಂಗಣಗಳ ಮಾಹಿತಿ ಹಾಗೂ ಈ ಕ್ರೀಡಾಂಗಣಗಳ ಅಭಿವೃದ್ಧಿಗಾಗಿ ಕೈಗೊಂಡಿರುವ ಕ್ರಮಗಳ ವಿವರಗಳನ್ನು ಅನುಬಂಧ–3ರಲ್ಲಿ ಒದಗಿಸಿದೆ. |
| ಇ | ಚನ್ನರಾಯಪಟ್ಟಣ ತಾಲ್ಲೂಕು ಕ್ರೀಡಾಂಗಣ ನಿರ್ಮಾಣಕ್ಕಾಗಿ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು; ಖರ್ಚಾದ ಮೊತ್ತವೆಷ್ಟು; ಈ ಕ್ರೀಡಾಂಗಣದ ಕಾಮಗಾರಿಗಳು ಯಾವ ಹಂತದಲ್ಲಿದೆ; ಹಾಗೂ ಈ ಕ್ರೀಡಾಂಗಣವು ಕ್ರೀಡಾಪಟುಗಳ ಉಪಯೋಗಕ್ಕೆ ಯಾವಾಗ ಲಭ್ಯವಿರುತ್ತದೆ. | ಚನ್ನರಾಯಪಟ್ಟಣದ ತಾಲ್ಲೂಕು ಕ್ರೀಡಾಂಗಣವನ್ನು ಹೈಟೆಕ್ ಕ್ರೀಡಾಂಗಣವಾಗಿ ಅಭಿವೃದ್ಧಿ ಪಡಿಸಲು ಚೆನ್ನರಾಯಪಟ್ಟಣ ಪುರಸಭೆಯಿಂದ ರೂ.100.00 ಲಕ್ಷಗಳ ಅನುದಾನವನ್ನು ಪಡೆದು ಟೆಂಡರ್ ಮೂಲಕ ಪೆವಿಲಿಯನ್ ಬಿಲ್ಡಿಂಗ್, ಪೆವಿಲಿಯನ್ ಟ್ರಸ್ ಶೀಟ್ ಅಳವಡಿಕೆ, ಕಾಲಂ ಬೀನ್ ಅಳವಡಿಕೆ, ಪೆವಿಲಿಯನ್ ಮುಂಭಾಗ 40 ಮೀ ಕಾಂಕ್ರೀಟ್ ಡ್ರೇನ್, ಬೋರ್‌ವೆಲ್, ಹೈಮಾಸ್ ಲೈಟಿಂಗ್, ಎಲೆಕ್ಟ್ರಿಕಲ್ ವರ್ಕ್, ಧ್ವಜಕಟ್ಟೆ ನಿರ್ಮಾಣ, ಕ್ರೀಡಾಪಟುಗಳು ಕುಳಿತುಕೊಳ್ಳಲು ಗ್ಯಾಲರಿ ನಿರ್ಮಾಣ, ಬಣ್ಣ ಬಳಿಯುವ ಕಾರ್ಯ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು ಕಾಮಗಾರಿ ಪ್ರಗತಿಯಲ್ಲಿದೆ. ಇಲಾಖಾ ಅನುದಾನ ರೂ.32.00 ಲಕ್ಷಗಳಲ್ಲಿ ಉಳಿಕೆ ಕಾಮಗಾರಿಗಳನ್ನು ನಿರ್ವಹಿಸಲು ಕ್ರಮಕೈಗೊಳ್ಳಲಾಗಿದೆ. ಕ್ರೀಡಾಂಗಣವನ್ನು ಕ್ರೀಡಾಪಟುಗಳು ಮತ್ತು ಶಾಲಾ ಕಾಲೇಜುಗಳು ಕ್ರೀಡಾಕೂಟಗಳನ್ನು ಆಯೋಜಿಸಲು ಬಳಕೆ ಮಾಡಲಾಗುತ್ತಿದೆ. |

ಸಂಖ್ಯೆ: ಯುಸೇಇ 52 ಯುಸೇಭಾ 2018.

(ಡಾ॥ ಜಿ. ಪರಮೇಶ್ವರ)
ಮಾನ್ಯ ಉಪ ಮುಖ್ಯಮಂತ್ರಿಗಳು

# ಅನುಬಂಧ-1

## ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಪ್ರಮುಖ ಕಾರ್ಯಕ್ರಮಗಳ ವಿವರ

1. **ಮೂಲ ಸೌಕರ್ಯಗಳ ಸೃಜನೆ:**

- ಅಂತರ-ರಾಷ್ಟ್ರೀಯ ಗುಣಮಟ್ಟದ ಕ್ರೀಡಾ ಮೂಲ ಸೌಕರ್ಯಗಳನ್ನು ರಾಜ್ಯದ ಎಲ್ಲಾ ಭಾಗಗಳಲ್ಲಿ ಒದಗಿಸಲು ಒತ್ತು ನೀಡಲಾಗಿದೆ.
- ರಾಜ್ಯದ 28 ಜಿಲ್ಲೆಗಳಲ್ಲಿ ಜಿಲ್ಲಾ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದ್ದು, ಚಾಮರಾಜನಗರದಲ್ಲಿ ಜಿಲ್ಲಾ ಕ್ರೀಡಾಂಗಣ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲಾ ಕ್ರೀಡಾಂಗಣ ನಿರ್ಮಾಣಕ್ಕೆ ನಿವೇಶನವನ್ನು ಗುರುತಿಸಲಾಗಿದೆ.
- ರಾಜ್ಯದಲ್ಲಿ 117 ತಾಲ್ಲೂಕು ಕ್ರೀಡಾಂಗಣಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, 04 ಕ್ರೀಡಾಂಗಣಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. 08 ತಾಲ್ಲೂಕುಗಳಲ್ಲಿ ನಿವೇಶನ ಲಭ್ಯವಿದ್ದು, ಇನ್ನೂ 18 ತಾಲ್ಲೂಕುಗಳಲ್ಲಿ ನಿವೇಶನ ಲಭ್ಯವಿರುವುದಿಲ್ಲ. ನಿವೇಶನ ಪಡೆಯಲು ಆದ್ಯತೆಯ ಮೇರೆಗೆ ಕ್ರಮ ವಹಿಸಲಾಗುತ್ತಿದೆ.
- ರಾಜ್ಯದ ವಿವಿಧೆಡೆ 42 ಒಳಾಂಗಣ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದ್ದು, 06 ಕಾಮಗಾರಿಗಳು ಪ್ರಗತಿಯಲ್ಲಿವೆ.
- ರಾಜ್ಯದ ವಿವಿಧೆಡೆ ಒಟ್ಟು 27 ಈಜುಕೊಳಗಳನ್ನು ನಿರ್ಮಿಸಲಾಗಿದ್ದು, 02 ಕಾಮಗಾರಿಗಳು ಪ್ರಗತಿಯಲ್ಲಿವೆ.
- ರಾಜ್ಯದಲ್ಲಿ 13 ಅಂತರ-ರಾಷ್ಟ್ರೀಯ ಗುಣಮಟ್ಟದ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್‌ಗಳನ್ನು ಅಳವಡಿಸಲಾಗಿದ್ದು, 02 ಕಾಮಗಾರಿಗಳು ಪ್ರಗತಿಯಲ್ಲಿವೆ.
- ರಾಜ್ಯದಲ್ಲಿ 03 ಅಂತರ-ರಾಷ್ಟ್ರೀಯ ಗುಣಮಟ್ಟದ ಸಿಂಥೆಟಿಕ್ ಹಾಕಿ ಟರ್ಫ್‌ಗಳನ್ನು ಅಳವಡಿಸಲಾಗಿದ್ದು, 02 ಕಾಮಗಾರಿಗಳು ಪ್ರಗತಿಯಲ್ಲಿವೆ.
- ಬಳ್ಳಾರಿಯಲ್ಲಿ ಅಂತರ-ರಾಷ್ಟ್ರೀಯ ಗುಣಮಟ್ಟದ ಸಿಂಥೆಟಿಕ್ ಫುಟ್ಬಾಲ್ ಟರ್ಫ್ ಅಳವಡಿಸಲಾಗಿದೆ.

2. **ಕ್ರೀಡಾಕೂಟಗಳ ಆಯೋಜನೆ:**

ದಸರಾ, ಸರ್ಕಾರಿ ನೌಕರರ ಕ್ರೀಡಾಕೂಟಗಳನ್ನು ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯ ಮಟ್ಟಗಳಲ್ಲಿ ಆಯೋಜಿಸಲಾಗುತ್ತಿದೆ.

3. **ಗರಡಿ ಮನೆಗಳ ಪುನರುಜ್ಜೀವನ:**

- ರಾಜ್ಯಾದ್ಯಂತ ಕುಸ್ತಿ ಪೈಲ್ವಾನರುಗಳ ದೈನಂದಿನ ತರಬೇತಿಗಾಗಿ ಗ್ರಾಮೀಣ ಗರಡಿ ಮನೆ/ವ್ಯಾಯಾಮ ಶಾಲೆಗಳ ನಿರ್ಮಾಣ ಹಾಗೂ ದುರಸ್ತಿ ಯೋಜನೆ.
- ಹೊಸ ಗರಡಿ ಮನೆ ನಿರ್ಮಾಣಕ್ಕಾಗಿ ಗರಿಷ್ಠ ರೂ 10.00 ಲಕ್ಷಗಳಂತೆ ಅನುದಾನ ಒದಗಿಸಲಾಗುತ್ತಿದೆ.

4. **ಕ್ರೀಡಾ ವಸತಿ ಶಾಲೆಗಳು:**

ರಾಜ್ಯದ 34 ಕ್ರೀಡಾ ವಸತಿ ಶಾಲೆಗಳಲ್ಲಿ ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ 5ನೇ ತರಗತಿಯಿಂದ ಸ್ನಾತಕೋತ್ತರ ಹಂತದವರೆಗೆ ಪ್ರವೇಶಾವಕಾಶ ನೀಡಲಾಗುತ್ತಿದ್ದು, ಉಚಿತ ವೈಜ್ಞಾನಿಕ ಕ್ರೀಡಾ ತರಬೇತಿ, ಪೌಷ್ಠಿಕ ಊಟೋಪಹಾರ, ಕ್ರೀಡಾ ಕಿಟ್, ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಪ್ರಯಾಣ ಭತ್ಯೆ, ವೈದ್ಯಕೀಯ ವೆಚ್ಚ, ಕ್ರೀಡಾ ಸಾಧನೆಗೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ. 2017-18 ನೇ ಸಾಲಿನಲ್ಲಿ 1496 ಬಾಲಕರು ಹಾಗೂ 702 ಬಾಲಕಿಯರೂ ಸೇರಿದಂತೆ 2198 ಕ್ರೀಡಾಪಟುಗಳಿಗೆ ಕ್ರೀಡಾ ವಸತಿ ನಿಲಯಗಳಿಗೆ ದಾಖಲಾತಿ ನೀಡಲಾಗಿದೆ.

5. <u>ಏಕಲವ್ಯ ಪ್ರಶಸ್ತಿ:</u>

- ರಾಷ್ಟ್ರೀಯ ಮತ್ತು ಅಂತರ-ರಾಷ್ಟ್ರೀಯ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿ, ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ರಾಜ್ಯದ ಅತ್ಯುನ್ನತ ಕ್ರೀಡಾ ಪ್ರಶಸ್ತಿಯಾದ ಏಕಲವ್ಯ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಈ ಪ್ರಶಸ್ತಿಯು ತಲಾ ರೂ 2.00 ಲಕ್ಷ ನಗದು, ಕಂಚಿನ ಪ್ರತಿಮೆ, ಪ್ರಮಾಣ ಪತ್ರ, ಇತ್ಯಾದಿ ಒಳಗೊಂಡಿರುತ್ತದೆ.
- 2017-18ನೇ ಸಾಲಿನಲ್ಲಿ ಒಟ್ಟು 13 ಕ್ರೀಡಾಪಟುಗಳಿಗೆ ಪ್ರಶಸ್ತಿ ನೀಡಿ, ಗೌರವಿಸಲಾಗಿದೆ.

6. <u>ಜೀವಮಾನ ಸಾಧನೆ ಪ್ರಶಸ್ತಿ:</u>

- ರಾಷ್ಟ್ರೀಯ ಮತ್ತು ಅಂತರ-ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ತರಬೇತಿ ನೀಡಿದ ರಾಜ್ಯದ ತರಬೇತುದಾರರಿಗೆ ಅವರು ಕ್ರೀಡಾ ಕ್ಷೇತ್ರಕ್ಕೆ ನೀಡಿರುವ ಸೇವೆಯನ್ನು ಪರಿಗಣಿಸಿ, ಪ್ರಶಸ್ತಿ ನೀಡಲಾಗುತ್ತಿದೆ. ಈ ಪ್ರಶಸ್ತಿಯು ತಲಾ ರೂ 1.50 ಲಕ್ಷ ನಗದು, ಕಂಚಿನ ಪ್ರತಿಮೆ, ಪ್ರಮಾಣ ಪತ್ರ, ಇತ್ಯಾದಿ ಒಳಗೊಂಡಿರುತ್ತದೆ.
- 2017-18 ನೇ ಸಾಲಿನಲ್ಲಿ ಇಬ್ಬರು ಕ್ರೀಡಾ ಸಾಧಕರಿಗೆ ಪ್ರಶಸಿ ನೀಡಿ, ಗೌರವಿಸಲಾಗಿದೆ.

7. <u>ಕ್ರೀಡಾ ಪೋಷಕ ಪ್ರಶಸ್ತಿ:</u>

- ಕ್ರೀಡಾ ಕ್ಷೇತ್ರದ ಬೆಳವಣಿಗೆಗೆ ಸ್ವಯಂ-ಪ್ರೇರಣೆಯಿಂದ ವಿವಿಧ ರೀತಿಯಲ್ಲಿ ಪ್ರೋತ್ಸಾಹ ನೀಡುತ್ತಿರುವ ಕ್ರೀಡಾ ಪೋಷಕ/ಸಂಸ್ಥೆ/ಕಾಲೇಜು/ವಿಶ್ವವಿದ್ಯಾಲಯಗಳಿಗೆ ಕ್ರೀಡಾ ಪೋಷಕ ಪ್ರಶಸ್ತಿ ನೀಡಲಾಗುತ್ತಿದೆ. ಈ ಪ್ರಶಸ್ತಿಯು ತಲಾ ರೂ 5.00 ಲಕ್ಷ ನಗದು ಮತ್ತು ಪ್ರಮಾಣ ಪತ್ರವನ್ನು ಒಳಗೊಂಡಿರುತ್ತದೆ.
- 2017-18 ನೇ ಸಾಲಿನಲ್ಲಿ 10 ಸಂಸ್ಥೆಗಳಿಗೆ ಪ್ರಶಸ್ತಿ ನೀಡಿ, ಗೌರವಿಸಲಾಗಿದೆ.

8. <u>'ಕರ್ನಾಟಕ ಕ್ರೀಡಾ ರತ್ನ' ಪ್ರಶಸ್ತಿ:</u>

ಅಂತರ-ರಾಷ್ಟ್ರೀಯ ಸ್ಪರ್ಧೆಗಳು ಇಲ್ಲದ ಗ್ರಾಮೀಣ ದೇಸಿ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿಯನ್ನು ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಆದುದರಿಂದ, ಗ್ರಾಮೀಣ ದೇಸೀ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು 2014-15 **ನೇ** ಸಾಲಿನಿಂದ **'ಕರ್ನಾಟಕ ಕ್ರೀಡಾ ರತ್ನ' ಪ್ರಶಸ್ತಿ** ಆರಂಭಿಸಲಾಗಿದ್ದು, ಪ್ರತಿಯೊಬ್ಬರಿಗೆ **ರೂ 1.00 ಲಕ್ಷ** ನಗದು ಪುರಸ್ಕಾರ ನೀಡಲಾಗುತ್ತಿದೆ. 2017-18 ನೇ ಸಾಲಿನಲ್ಲಿ 09 ಅರ್ಹ ಕ್ರೀಡಾಪಟುಗಳಿಗೆ ಪ್ರಶಸ್ತಿ ನೀಡಲಾಗಿದೆ.

9. <u>ಪ್ರತಿಭಾವಂತ ಯುವ ಕ್ರೀಡಾಪಟುಗಳ 'ಶೈಕ್ಷಣಿಕ ಶುಲ್ಕ ಮರುಪಾವತಿ':</u>

- ಪ್ರಥಮ ಪಿ.ಯು.ಸಿ. ಯಿಂದ ಸ್ನಾತಕೋತ್ತರ ಪದವಿಯವರೆಗೆ (ಜಿಮ್ನಾಸ್ಟಿಕ್ ಮತ್ತು ಈಜು ಕ್ರೀಡೆಗಳಿಗೆ ಮಾತ್ರ 5ನೇ ತರಗತಿಯಿಂದ) ರಾಷ್ಟ್ರ ಮತ್ತು ಅಂತರ-ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಕರ್ನಾಟಕ ರಾಜ್ಯದ ಕ್ರೀಡಾಪಟುಗಳ ಅಧಿಕೃತ ಬೋಧನಾ ಶುಲ್ಕವನ್ನು ಮರುಪಾವತಿಸುವ **ಯೋಜನೆ**.
- 2017-18 ನೇ **ಸಾಲಿನಲ್ಲಿ 325 ಕ್ರೀಡಾಪಟುಗಳಿಗೆ ರೂ 113.59 ಲಕ್ಷಗಳ** ಶೈಕ್ಷಣಿಕ ಶುಲ್ಕ ಮರುಪಾವತಿ ಮಾಡಲಾಗಿದೆ.

10. <u>ಪ್ರತಿಭಾವಂತ ಮಾಧ್ಯಮಿಕ ಮತ್ತು ಪ್ರೌಢ ಶಾಲಾ ಕ್ರೀಡಾಪಟುಗಳಿಗೆ ವಾರ್ಷಿಕ 'ಕ್ರೀಡಾ ವಿದ್ಯಾರ್ಥಿ ವೇತನ':</u>

- ಕ್ರೀಡೆಯಲ್ಲಿ ರಾಜ್ಯ ಮಟ್ಟದಲ್ಲಿ ಪದಕ ವಿಜೇತರಾಗಿ ರಾಷ್ಟ್ರ, ಅಂತರ-ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ 8 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ತಲಾ ರೂ 10,000/- ಕ್ರೀಡಾ ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.
- 2017-18 ನೇ ಸಾಲಿನಲ್ಲಿ ಒಟ್ಟು 375 ಕ್ರೀಡಾಪಟುಗಳಿಗೆ ನೀಡಲಾಗಿದೆ.

11. **ಕ್ರೀಡಾ ಸಾಧಕರಿಗೆ 'ನಗದು ಪುರಸ್ಕಾರ':**

- ರಾಷ್ಟ್ರೀಯ ಮತ್ತು ಅಂತರ-ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ನಗದು ಪುರಸ್ಕಾರ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.
- 2017-18 ನೇ ಸಾಲಿನಲ್ಲಿ 760 ಕ್ರೀಡಾಪಟುಗಳಿಗೆ ಒಟ್ಟು ರೂ 789.65 ಲಕ್ಷಗಳನ್ನು ನಗದು ಪುರಸ್ಕಾರವಾಗಿ ವಿತರಿಸಲಾಗಿದೆ.

12. **'ಸ್ಪೋರ್ಟ್ಸ್ ಅಕಾಡೆಮಿ ಫಾರ್ ಎಕ್ಸಲೆನ್ಸ್' ಯೋಜನೆಯಡಿ ಪ್ರತಿಭಾವಂತ ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ:**

- ಮುಂಬರುವ ವರ್ಷಗಳಲ್ಲಿ ಅಂತರ-ರಾಷ್ಟ್ರೀಯ ಮಟ್ಟದಲ್ಲಿ ಗಣನೀಯ ಸಾಧನೆ ದಾಖಲಿಸುವ ಸಾಧ್ಯತೆ ಇರುವ ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ಪೌಷ್ಟಿಕ ಆಹಾರ, ಉನ್ನತ ತರಬೇತಿ, ಕ್ರೀಡಾ ಕಿಟ್ ಹಾಗೂ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಪ್ರಯಾಣ ವೆಚ್ಚಗಳನ್ನು ಭರಿಸಲು ಅನುಕೂಲವಾಗುವಂತೆ ಪ್ರೋತ್ಸಾಹ ನೀಡುವ ಯೋಜನೆ.
- 2017-18 ನೇ ಸಾಲಿನಲ್ಲಿ ಒಟ್ಟು 93 ಕ್ರೀಡಾಪಟುಗಳಿಗೆ ರೂ 200.00 ಲಕ್ಷಗಳ ಪ್ರೋತ್ಸಾಹ ಧನ ನೀಡಲಾಗಿರುತ್ತದೆ.

13. **'ಗ್ರಾಮೀಣ ಕ್ರೀಡೋತ್ಸವ':**

- ಗ್ರಾಮೀಣ ದೇಸೀ ಕ್ರೀಡೆಗಳಿಗೆ ಉತ್ತೇಜನ ನೀಡಲು ಪ್ರತಿ ತಾಲ್ಲೂಕಿಗೆ ತಲಾ ರೂ 1.50 ಲಕ್ಷದಂತೆ ಯುವ ಸಂಘಗಳಿಗೆ ಕ್ರೀಡಾ ಚಟುವಟಿಕೆಗಳನ್ನು ಆಯೋಜಿಸಲು ಅನುದಾನ ನೀಡುವ ಯೋಜನೆ.
- 2017-18 ನೇ ಸಾಲಿನಲ್ಲಿ ಒಟ್ಟು 516 ಸಂಘಗಳಿಗೆ ಒಟ್ಟು ರೂ 258.00 ಲಕ್ಷ ಅನುದಾನ ನೀಡಲಾಗಿದೆ.

14. **ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟಗಳು:**

- ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಸರ್ಕಾರಿ ನೌಕರರಲ್ಲಿ ಕ್ರೀಡಾ ಮನೋಭಾವ ವೃದ್ಧಿ ಮತ್ತು ಆರೋಗ್ಯಪೂರ್ಣ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೇರೇಪಿಸುವ ನಿಟ್ಟಿನಲ್ಲಿ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಕ್ರೀಡಾಕೂಟಗಳನ್ನು ಆಯೋಜಿಸಲಾಗುತ್ತಿದೆ ಮತ್ತು ರಾಷ್ಟ್ರ ಮಟ್ಟಕ್ಕೆ ತಂಡಗಳನ್ನು ನಿಯೋಜಿಸಲಾಗುತ್ತಿದೆ.
- 2017-18 ನೇ ಸಾಲಿನಲ್ಲಿ ರಾಜ್ಯ ಮಟ್ಟದ ಕ್ರೀಡಾಕೂಟವನ್ನು ಬಳ್ಳಾರಿಯಲ್ಲಿ ಸಂಘಟಿಸಲಾಗಿದೆ.

15. **ಮಾಜಿ ಕ್ರೀಡಾಪಟುಗಳಿಗೆ ಮಾಸಾಶನ:**

- ರಾಜ್ಯ, ರಾಷ್ಟ್ರ ಹಾಗೂ ಅಂತರ-ರಾಷ್ಟ್ರೀಯ ಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿ, ಸಾಧನೆಗೈದು, ಪ್ರಸ್ತುತ 50 ವರ್ಷಕ್ಕಿಂತ ಹೆಚ್ಚಿನ ವಯೋಮಾನದ ರೂ 20,000/- ಕ್ಕಿಂತ ಕಡಿಮೆ ವಾರ್ಷಿಕ ಆದಾಯ ಹೊಂದಿರುವ ಕಷ್ಟಪರಿಸ್ಥಿತಿಯಲ್ಲಿರುವ ಮಾಜಿ ಕ್ರೀಡಾಪಟುಗಳಿಗೆ ನೆರವು ನೀಡಲು ಮಾಸಾಶನ ಯೋಜನೆ.
- 2017 ರಲ್ಲಿ 1621 ಮಾಜಿ ಕ್ರೀಡಾಪಟುಗಳಿಗೆ ಮಾಸಾಶನ ನೀಡಲಾಗಿದೆ.

16. **ನಮ್ಮೂರ ಶಾಲೆಗೆ, ನಮ್ಮ ಯುವಜನರು:**

- ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡಿದ ಕ್ರೀಡಾಪಟುಗಳನ್ನು ಹೊಂದಿದ ಸರ್ಕಾರಿ ಶಾಲೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಪ್ರತೀ ತಾಲ್ಲೂಕಿನ ಒಂದು ಸರ್ಕಾರಿ ಶಾಲೆಗೆ ತಲಾ ರೂ 1.00 ಲಕ್ಷ ಪ್ರೋತ್ಸಾಹ ಧನ ನೀಡಲಾಗುವುದು (ರೂ 90,000/- ಕ್ರೀಡಾ ಸಾಮಗ್ರಿಗಳನ್ನು ಪೂರೈಸಲು ಶಾಲೆಗೆ ಹಾಗೂ ರೂ 10,000/- ಗಳನ್ನು ಶಾಲೆಯ ದೈಹಿಕ ಶಿಕ್ಷಕರಿಗೆ).
- **2017-18 ನೇ ಸಾಲಿನಲ್ಲಿ ಒಟ್ಟು 162 ಶಾಲೆಗಳಿಗೆ ಧನಸಹಾಯ ವಿತರಿಸಲಾಗಿದೆ.**

17. **'ಯುವ ಶಕ್ತಿ ಕೇಂದ್ರ' ಕಾರ್ಯಕ್ರಮ:**

- ಯುವಜನರ ದೈಹಿಕ ಆರೋಗ್ಯಕ್ಕೆ ಪೂರಕವಾದ ಸೌಲಭ್ಯಗಳನ್ನು ಜಿಲ್ಲಾ ಕ್ರೀಡಾಂಗಣ/ತಾಲ್ಲೂಕು ಕ್ರೀಡಾಂಗಣ/ಕ್ರೀಡಾ ಶಾಲೆ ನಿಲಯ/ಸರ್ಕಾರಿ ಕಾಲೇಜುಗಳಿಗೆ ಗರಿಷ್ಟ ತಲಾ ರೂ 15.00 ಲಕ್ಷ ಗಳಲ್ಲಿ ಒದಗಿಸುವ ಯೋಜನೆ.
- 2017-18 ನೇ ಸಾಲಿನಲ್ಲಿ 08 ಘಟಕಗಳಿಗೆ ಒದಗಿಸಲಾಗಿದೆ.

18. **'ಯುವ ಸ್ಪಂದನ':**

- ಯುವಜನರ ಮಾನಸಿಕ ಆರೋಗ್ಯದ ರಕ್ಷಣೆಗಾಗಿ ಅಗತ್ಯವಾದ ಆಪ್ತ ಸಮಾಲೋಚನೆ ಸೌಲಭ್ಯವನ್ನು ಒದಗಿಸುವುದು ಹಾಗೂ ಸಂಪನ್ಮೂಲ ವ್ಯಕ್ತಿಗಳ ತರಬೇತಿಯನ್ನು ನಿಮ್ಹಾನ್ಸ್ ಸಂಸ್ಥೆಯ ಸಹಯೋಗದೊಂದಿಗೆ ಎಲ್ಲಾ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.
- 2017-18 ನೇ ಸಾಲಿನಲ್ಲಿ 18,00,000 ಯುವಜನರನ್ನು ತಲುಪಲಾಗಿದ್ದು, ರೂ 120.00 ಲಕ್ಷಗಳನ್ನು ನಿಮ್ಹಾನ್ಸ್ ಸಂಸ್ಥೆಗೆ ಒದಗಿಸಲಾಗಿದೆ.

19. **'ಯುವ ಚೈತನ್ಯ' ಕಾರ್ಯಕ್ರಮ:**

- ಯುವಜನರನ್ನು ಸಂಘಟಿಸಿ, ಧನಾತ್ಮಕ ಚಟುವಟಿಕೆಗಳಲ್ಲಿ ತೊಡಗುವಂತೆ ಪ್ರೋತ್ಸಾಹಿಸಲು ಯುವಜನರಿಗೆ ಆರೋಗ್ಯಕರ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಸಹಾಯಕವಾಗುವ ವಾತಾವರಣವನ್ನು ಸೃಜಿಸಲು ಯುವ ಸಂಘಗಳಿಗೆ ಕ್ರೀಡಾ ಕಿಟ್ ವಿತರಿಸುವ ಯೋಜನೆ.
- 2017-18 ನೇ ಸಾಲಿನಲ್ಲಿ ರಾಜ್ಯದ 5,000 ಸಂಘಗಳಿಗೆ ಕ್ರೀಡಾ ಕಿಟ್‌ಗಳನ್ನು ವಿತರಿಸಲಾಗಿದೆ.

20. **ಯುವಜನೋತ್ಸವ:**

- ಸ್ವಾಮಿ ವಿವೇಕಾನಂದರ ಜನ್ಮದಿನೋತ್ಸವ ಅಂಗವಾಗಿ ಪ್ರತಿ ವರ್ಷ ಜನವರಿ ಮಾಹೆಯಲ್ಲಿ ಶಾಸ್ತ್ರೀಯ ಕಲಾ ಪ್ರಕಾರಗಳಲ್ಲಿ ಸ್ಪರ್ಧೆಗಳನ್ನು ಒಳಗೊಂಡ ಯುವಜನೋತ್ಸವವನ್ನು ಆಚರಿಸಲಾಗುತ್ತಿದೆ.
- ರಾಷ್ಟ್ರ ಮಟ್ಟದ ಯುವಜನೋತ್ಸವದಲ್ಲಿ ಭಾಗವಹಿಸಲು ಜಿಲ್ಲಾ ಮತ್ತು ರಾಜ್ಯ ಮಟ್ಟ ಎಂಬ ಎರಡು ಹಂತಗಳಲ್ಲಿ ಇಲಾಖೆಯ ವತಿಯಿಂದ ಯುವಜನೋತ್ಸವ ಆಯೋಜಿಸಲಾಗುತ್ತಿದೆ.
- ರಾಜ್ಯ ಮಟ್ಟದಲ್ಲಿ ಆಯ್ಕೆಯಾದ ಸ್ಪರ್ಧಾಳುಗಳನ್ನು ರಾಷ್ಟ್ರ ಮಟ್ಟದ ಯುವಜನೋತ್ಸವದಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಲು ನಿಯೋಜಿಸಲಾಗುತ್ತದೆ.
- 2017-18 ನೇ ಸಾಲಿನಲ್ಲಿ ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮವನ್ನು ಸಂಘಟನೆ ಮಾಡಲು ಒಂದು ಜಿಲ್ಲೆಗೆ ತಲಾ ರೂ 50,000/- ದಂತೆ 30 ಜಿಲ್ಲೆಗಳಿಗೆ ಒಟ್ಟು ರೂ 15.00 ಲಕ್ಷ ಅನುದಾನ ಹಾಗೂ ಉಡುಪಿ ಜಿಲ್ಲೆಯಲ್ಲಿ ಜರುಗಿದ ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮಕ್ಕೆ ರೂ. 20.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

21. **ಯುವಜನ ಮೇಳ:**

- ಯುವಜನರಲ್ಲಿ ಹುದುಗಿರುವ ಜನಪದ ಸಾಂಸ್ಕೃತಿಕ ಕಲಾ ಪ್ರತಿಭೆಯನ್ನು ಪ್ರದರ್ಶಿಸಲು ಅನುಕೂಲವಾಗುವಂತೆ ಇಲಾಖೆಯು ಪ್ರತಿ ವರ್ಷ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಯುವಜನ ಮೇಳಗಳನ್ನು ಸಂಘಟಿಸುತ್ತಿದೆ.
- **ಭಾವಗೀತೆ, ಗೀಗೀಪದ, ಲಾವಣಿ, ಕೋಲಾಟ, ವೀರಗಾಸೆ(ಪುರವಂತಿಕೆ/ವೀರಭದ್ರ ಕುಣಿತ), ಡೊಳ್ಳು ಕುಣಿತ, ರಂಗಗೀತೆ, ಜಾನಪದ ನೃತ್ಯ, ರಾಗಿ/ಜೋಳ ಬೀಸುವ ಒನಕೆ ಪದ, ಸೋಬಾನೆ ಪದ, ಭಜನೆ, ಜಾನಪದ ಗೀತೆ, ದೊಡ್ಡಾಟ (ಮೂಡಲಪಾಯ), ಸಣ್ಣಾಟ, ಯಕ್ಷಗಾನ, ಚರ್ಮವಾದ್ಯ ಮೇಳ ಮತ್ತು ಏಕಪಾತ್ರಾಭಿನಯ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿದೆ.**

- 2017-18 ನೇ ಸಾಲಿನ ರಾಜ್ಯ ಮಟ್ಟದ ಯುವಜನ ಮೇಳ ಕಾರ್ಯಕ್ರಮವನ್ನು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನಲ್ಲಿ ಸಂಘಟನೆ ಮಾಡಲು ರೂ 40.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

22. **'ಯುವ ಶಕ್ತಿ ಸಂಘ' ಕಾರ್ಯಕ್ರಮ:**

- 'ಯುವ ಶಕ್ತಿ ಸಂಘ' ಯೋಜನೆಯಡಿ ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ಯುವಜನರನ್ನು ತೊಡಗಿಸುವುದರ ಮೂಲಕ ಬಡ ಯುವಜನರ ಆದಾಯವನ್ನು ಹೆಚ್ಚಿಸಿ, ಆರ್ಥಿಕ ಸ್ಥಿರತೆಯನ್ನು ಮೂಡಿಸುವುದು, ತನ್ಮೂಲಕ ಬಡತನ ನಿವಾರಣೆ ಮಾಡುವುದು ಮೂಲ ಉದ್ದೇಶವಾಗಿರುತ್ತದೆ.
- ಈ ಕಾರ್ಯಕ್ರಮದಡಿ ಒಂದು ಸಂಘಕ್ಕೆ ತಲಾ ರೂ 5.00 ಲಕ್ಷದಂತೆ 100 ಸಂಘಗಳಿಗೆ ಸುತ್ತುನಿಧಿ ಅನುದಾನವನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ.
- 2017-18 ನೇ ಸಾಲಿನಲ್ಲಿ 12 ಜಿಲ್ಲೆಗಳ 46 ಸಂಘಗಳಿಗೆ ತಲಾ ರೂ 5.00 ಲಕ್ಷದಂತೆ ಒಟ್ಟು ರೂ 230.00 ಲಕ್ಷ ಸುತ್ತುನಿಧಿಯನ್ನು ಬಿಡುಗಡೆ ಮಾಡಲಾಗಿದೆ.

23. **ಯುವಜನರಿಗೆ ತರಬೇತಿ ಕಾರ್ಯಕ್ರಮ:**

1) **ಜೀವನ ಕೌಶಲ್ಯ ಅಭಿವೃದ್ಧಿ ತರಬೇತಿ:**

- ಈ ಕಾರ್ಯಕ್ರಮದಡಿ ಯುವಜನರು ತಮ್ಮ ಅಂತರ್ಗತ ಮತ್ತು ಅನನ್ಯ ಸಾಮರ್ಥ್ಯವನ್ನು ಅನ್ವೇಷಿಸಲು ಮತ್ತು ಸಕಾರಾತ್ಮಕವಾಗಿ ಸಮಾಜಕ್ಕೆ ಕೊಡುಗೆ ನೀಡುವಂತೆ ಉತ್ತೇಜಿಸಲು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.
- ಯುವಜರನ್ನು ಸಬಲೀಕರಿಸುವುದು ಮತ್ತು ಸಕ್ರಿಯಗೊಳಿಸುವುದು ಹಾಗೂ ಯುವಜನರನ್ನು ಆರ್ಥಿಕವಾಗಿ ಸಬಲೀಕೃತಗೊಳ್ಳಲು 10 ಮೂಲ ಜೀವನ ಕೌಶಲ್ಯ ಚೌಕಟ್ಟನ್ನು ಪ್ರೇರೇಪಿಸುವುದು.

2) **ವೃತ್ತಿ ಕೌಶಲ್ಯ ತರಬೇತಿ:**

- ಈ ಕಾರ್ಯಕ್ರಮದಡಿ ಯುವಜನರು ಸ್ವ-ಉದ್ಯೋಗಿಗಳಾಗಲು ಅಗತ್ಯವಾದ ವೃತ್ತಿ ಕೌಶಲ್ಯ ತರಬೇತಿಗಳನ್ನು ನೀಡಲಾಗುತ್ತಿದೆ.

24. **'ಕರ್ನಾಟಕ ಸಹಸ್ರ ಕ್ರೀಡಾ ಪ್ರತಿಭಾ ಯೋಜನೆ':**

- ರಾಜ್ಯದ 1,000 ಅತ್ಯಂತ ಪ್ರತಿಭಾನ್ವಿತ ಯುವ ಕ್ರೀಡಾಪಟುಗಳನ್ನು ಗುರುತಿಸುವುದು.
- ಗುರುತಿಸಲಾದ ಕ್ರೀಡಾಪಟುಗಳಿಗೆ ವೈಜ್ಞಾನಿಕ ಕ್ರೀಡಾ ತರಬೇತಿ, ಕ್ರೀಡಾ ಕಿಟ್, ಪೌಷ್ಟಿಕ ಆಹಾರ, ಫಿಟ್ನೆಸ್ ಸೌಲಭ್ಯ ಪಡೆಯಲು ಪೂರಕ ಬೆಂಬಲ ಒದಗಿಸುವುದು.
- ಪ್ರತಿಯೊಬ್ಬರಿಗೆ ವಾರ್ಷಿಕ ತಲಾ ರೂ 1.00 ಲಕ್ಷ ಮೊತ್ತದ ಸಹಾಯಧನ ಅಥವಾ ಸೌಲಭ್ಯಗಳನ್ನು ಒದಗಿಸುವ ಯೋಜನೆ.
- ಕಾಲ-ಕಾಲಕ್ಕೆ ಕ್ರೀಡಾ ಸಾಧನೆಯ ಮೌಲ್ಯಮಾಪನವನ್ನು ಆಧರಿಸಿ, ಅಗತ್ಯ ಬೆಂಬಲವನ್ನು ನೀಡಲಾಗುವುದು.

25. **ಯುವ ಸಮ್ಮೇಳನಾ, ಕಾರ್ಯಾಗಾರ ಮತ್ತು ತರಬೇತಿ ಕಾರ್ಯಕ್ರಮ:**

- ಯುವಜನರನ್ನು ಹೆಚ್ಚು ಕ್ರಿಯಾಶೀಲರನ್ನಾಗಿಸುವ ದೃಷ್ಟಿಯಿಂದ ಪ್ರತಿ ಜಿಲ್ಲೆಯಲ್ಲಿಯೂ ಯುವಜನ ಸಮ್ಮೇಳನ, ಕಾರ್ಯಾಗಾರ ಮತ್ತು ಯುವ ತರಬೇತಿ ಶಿಬಿರಗಳನ್ನು ನಡೆಸಲಾಗುತ್ತಿದೆ.
- 2017-18 ನೇ ಸಾಲಿನಲ್ಲಿ ಈ ಕಾರ್ಯಕ್ರಮದ ಸಂಘಟನೆಗೆ ರೂ 70.00 ಲಕ್ಷಗಳನ್ನು ಒದಗಿಸಲಾಗಿದೆ.

**26. ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ:**

ಕೆಳಕಾಣಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

- ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಪದಕ ವಿಜೇತ ಕ್ರೀಡಾಪಟುಗಳಿಗೆ ಸಹಾಯಧನ ನೀಡುವುದು.
- ಯುವಜನರಿಗೆ ಉದ್ಯೋಗಾಧಾರಿತ ಕೌಶಲ್ಯ ತರಬೇತಿ ನೀಡುವುದು.
- ಸಮಾಜ ಕಲ್ಯಾಣ ಇಲಾಖೆ/ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದ ಅಧೀನದಲ್ಲಿರುವ ವಸತಿ ಶಾಲೆ/ನಿಲಯಗಳಿಗೆ ಕ್ರೀಡಾ/ಜಿಮ್ ಸಾಮಗ್ರಿಗಳನ್ನು ಪೂರೈಸುವುದು.
- ಸಂಘ–ಸಂಸ್ಥೆಗಳಿಗೆ ಜಿಮ್ ಸಾಮಗ್ರಿಗಳನ್ನು ಖರೀದಿಸಲು ಸಹಾಯಧನ ನೀಡುವುದು.
- ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ಶಾಲೆ/ನಿಲಯಗಳ ಕ್ರೀಡಾಪಟುಗಳಿಗೆ ಪೌಷ್ಟಿಕ ಆಹಾರ, ಕ್ರೀಡಾ ಗಂಟು, ಸಮವಸ್ತ್ರ, ಕ್ರೀಡಾ ಕಲಸ್ ನೀಡುವುದು.
- ಯುವಜನರಿಗೆ ಭೂಸಾಹಸ, ಜಲಸಾಹಸ ಮತ್ತು ವಾಯುಸಾಹಸ/ವೈಮಾನಿಕ ತರಬೇತಿಯನ್ನು ನೀಡುವುದು.

2017–18ನೇ ಸಾಲಿನಲ್ಲಿ ವಿಶೇಷ ಘಟಕ ಉಪಯೋಜನೆ ಅಡಿಯಲ್ಲಿ ರೂ. 2384.00 ಲಕ್ಷಗಳು ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ ರೂ. 966.00 ಲಕ್ಷಗಳು ಹಾಗೂ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೇ ಇರುವ ಮೊತ್ತದ ಅಡಿಯಲ್ಲಿ ವಿಶೇಷ ಘಟಕ ಉಪಯೋಜನೆ ಅಡಿಯಲ್ಲಿ ರೂ. 747.00 ಲಕ್ಷಗಳು ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ ರೂ 341.00 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಇದರಲ್ಲಿ ಒಟ್ಟು ರೂ 1386.00 ಲಕ್ಷಗಳ ವೆಚ್ಚವನ್ನು ಭರಿಸಲಾಗಿರುತ್ತದೆ. ಉಳಿಕೆ ಹಣವನ್ನು ಸರ್ಕಾರಕ್ಕೆ ಅಧ್ಯರ್ಪಣೆ ಮಾಡಲಾಗಿರುತ್ತದೆ.

**27. ಕರ್ನಾಟಕ ಕ್ರೀಡಾ ಪ್ರಾಧಿಕಾರ:**

- ಕರ್ನಾಟಕ ಕ್ರೀಡಾ ಪ್ರಾಧಿಕಾರವು ಸಂಘಗಳ ನೋಂದಾವಣೆ ಕಾಯ್ದೆ 1960 ರಡಿ ನೋಂದಾಯಿತ ಸಂಸ್ಥೆಯಾಗಿದ್ದು, 1995 ರಲ್ಲಿ ಸ್ಥಾಪಿಸಲಾಗಿದೆ.
- ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ಸದರಿ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದು, ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಪದನಿಮಿತ್ತ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.
- ಕರ್ನಾಟಕ ಕ್ರೀಡಾ ಪ್ರಾಧಿಕಾರವು 47 ರಾಜ್ಯ ಕ್ರೀಡಾ ಸಂಸ್ಥೆಗಳಿಗೆ ಮಾನ್ಯತೆ ನೀಡಿದ್ದು, ಈ ಸಂಸ್ಥೆಗಳಿಗೆ ರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಳಲ್ಲಿ ರಾಜ್ಯ ತಂಡ ಭಾಗವಹಿಸಲು ಹಾಗೂ ಪೂರ್ವಭಾವಿ ತರಬೇತಿ ಶಿಬಿರ ನಡೆಸಲು ಹಾಗೂ ರಾಜ್ಯ/ರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಳನ್ನು ನಡೆಸಲು ಅನುದಾನ ಸಂಹಿತೆ ನಿಯಮಾವಳಿ ಅನುಸಾರ ಅನುದಾನ ನೀಡುತ್ತಿದೆ.
- ಇತರೆ ಕ್ರೀಡಾ ಸಂಘ ಸಂಸ್ಥೆಗಳು ಆಯೋಜಿಸುವ ವಿವಿದ ರಾಜ್ಯ/ರಾಷ್ಟ್ರೀಯ ಪಂದ್ಯಾವಳಿ ಆಯೋಜನೆ ಸಲುವಾಗಿ ಪ್ರತಿ ವರ್ಷ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.
- ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಮಾಸಿಕ ಸಂಚಿತ ವೇತನದ ಆಧಾರದಲ್ಲಿ ತರಬೇತುದಾರರು, ನ್ಯೂಟ್ರೀಷನಿಸ್ಟ್, ಕ್ರೀಡಾ ವೈದ್ಯರು, ಫಿಟ್ನೆಸ್ ತಜ್ಞರು, ಫಿಸಿಯೋಥೆರಪಿಸ್ಟ್‌ಗಳು ಕಾರ್ಯನಿರ್ವಹಿಸುತ್ತಿದ್ದು, ವೈಜ್ಞಾನಿಕ ತರಬೇತಿ ನೀಡಲಾಗುತ್ತಿದೆ.
- 2017–18 ನೇ ಸಾಲಿನಲ್ಲಿ ರೂ 1900.00 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಪೂರ್ಣ ವೆಚ್ಚ ಭರಿಸಲಾಗಿರುತ್ತದೆ.

## 28. ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ:

- ಸಾಹಸ ಕ್ರೀಡೆಗಳನ್ನು ಸಂಘಟಿಸುವ ಪರಿಣತ ಸಂಸ್ಥೆ.
- ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯು 1989 ರಲ್ಲಿ ಸ್ಥಾಪನೆಗೊಂಡಿದ್ದು, ಸಂಘಗಳ ನೋಂದಾವಣೆ ಕಾಯ್ದೆ 1960 ರಡಿ ನೋಂದಾಯಿತ ಸಂಸ್ಥೆಯಾಗಿದೆ.
- ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ಸದರಿ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದು, ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಪದನಿಮಿತ್ತ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.
- ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯಿಂದ ಕೆಳಕಂಡ ಸಾಹಸ ಕ್ರೀಡಾ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ.

| ಕ್ರಸ | ಸಾಹಸ ಕ್ರೀಡಾ ಕೇಂದ್ರದ ಹೆಸರು | ಆಯೋಜಿಸಲಾಗುವ ಚಟುವಟಿಕೆಗಳು |
|---|---|---|
| 1. | ಶಿಲಾರೋಹಣಾ ಕೇಂದ್ರ, ರಾಮನಗರ | ರಾಕ್ ಕ್ಲೈಂಬಿಂಗ್, ರ್‍ಯಾಪೆಲ್ಲಿಂಗ್, ಟ್ರೆಕ್ಕಿಂಗ್, ಜುಮಾರಿಂಗ್, ಚಿಮ್ನಿ ಕ್ಲೈಂಬಿಂಗ್ ಇತ್ಯಾದಿ. |
| 2 | ಜಲಸಾಹಸ ಕೇಂದ್ರ, ವಾಣಿವಿಲಾಸ ಸಾಗರ, ಚಿತ್ರದುರ್ಗ ಜಿಲ್ಲೆ | ಕಯಾಕಿಂಗ್, ಜೆಟ್‌ಸ್ಕೀಯಿಂಗ್, ವಿಂಡ್ ಸರ್ಫಿಂಗ್, ಕ್ಯಾಂಪಿಂಗ್, ಮೌಂಟೇನ್ ಬೈಕಿಂಗ್. |
| 3 | ಶಿಲಾರೋಹಣಾ ಕೇಂದ್ರ, ಬಾದಾಮಿ | ರಾಕ್ ಕ್ಲೈಂಬಿಂಗ್, ರ್‍ಯಾಪೆಲ್ಲಿಂಗ್, ಟ್ರೆಕ್ಕಿಂಗ್, ಜುಮಾರಿಂಗ್, ಚಿಮ್ನಿ ಕ್ಲೈಂಬಿಂಗ್ ಇತ್ಯಾದಿ. |
| 4 | ಜಲಸಾಹಸ ಕೇಂದ್ರ, ಬರ್ಪೋಳೆ, ಕೊಡಗು | ವೈಟ್ ವಾಟರ್ ರ್‍ಯಾಫ್ಟಿಂಗ್, ಕಯಾಕಿಂಗ್, ಕೆನೋಯಿಂಗ್ ಇತ್ಯಾದಿ. |
| 5 | ಜಲಸಾಹಸ ಕೇಂದ್ರ, ಕಾರವಾರ, ಉತ್ತರ ಕನ್ನಡ ಜಿಲ್ಲೆ | ಕಯಾಕಿಂಗ್, ಜೆಟ್‌ಸ್ಕೀಯಿಂಗ್, ವಿಂಡ್ ಸರ್ಫಿಂಗ್, ಕ್ಯಾಂಪಿಂಗ್. |

- ವರ್ಲಕೊಂಡ, ಕೊಂಡಜ್ಜಿ, ಮಲ್ಪೆ ಮತ್ತು ಇತರೆ ಸ್ಥಳಗಳಲ್ಲಿ ಅಕಾಡೆಮಿಯ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ.
- 2017-18 ನೇ ಸಾಲಿನಲ್ಲಿ ಅಕಾಡೆಮಿಗೆ ಒಟ್ಟು ರೂ 175.00 ಲಕ್ಷ ಆಯವ್ಯಯ ಒದಗಿಸಲಾಗಿದ್ದು, ವಿವಿಧ ಸಾಹಸ ಕ್ರೀಡಾ ಶಿಬಿರಗಳು, ಪರಿಶಿಷ್ಟ ಜಾತಿ ಮತ್ತು ಪಂಗಡದ ಯುವಜನರಿಗೆ ಸಾಹಸ ಕ್ರೀಡಾ ಪ್ರಶಿಕ್ಷಕರಾಗಲು ತರಬೇತಿ ಹಾಗೂ ಸಾಹಸೋತ್ಸವಗಳನ್ನು ಆಯೋಜಿಸಲಾಗಿದೆ.

ಅನುಬಂಧ-2 (ಎ)

## ಹಾಸನ ಜಿಲ್ಲೆಯಲ್ಲಿ ಕಳೆದ 03 ವರ್ಷಗಳಲ್ಲಿ ಆಯೋಜಿಸಲಾದ ಪ್ರಮುಖ ಕಾರ್ಯಕ್ರಮಗಳು ಹಾಗೂ ವೆಚ್ಚದ ವಿವರ

| ಕ್ರಸಂ | ಕಾರ್ಯಕ್ರಮದ ವಿವರ | ವೆಚ್ಚದ ವಿವರ (ರೂಗಳಲ್ಲಿ) | ಫಲಾನುಭವಿಗಳ ವಿವರ | ಷರಾ |
|---|---|---|---|---|
| | | 2015-16 | | |
| 01 | ತಾಲೂಕಾ ದಸರಾ ಕ್ರೀಡಾಕೂಟಗಳು ಪ್ರತಿ ತಾಲೂಕಿಗೆ ತಲಾ ರೂ.20,000-00 ಗಳಂತೆ | 1,60,000-00 | ಪ್ರತಿ ತಾಲೂಕಿನಲ್ಲಿ ದಸರಾ ಕ್ರೀಡಾಕೂಟಕ್ಕೆ 300 ರಿಂದ 400 ಕ್ರೀಡಾಪಟುಗಳು ಭಾಗವಹಿಸಿರುತ್ತಾರೆ. | ಕ್ರೀಡಾಕೂಟ ಸಂಘಟನೆಗಾಗಿ ವೆಚ್ಚ ಭರಿಸಲಾಗಿದೆ. |
| 02 | ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ | 2,50,000-00 | ಪ್ರತಿ ತಾಲೂಕಿನ ದಸರಾ ಕ್ರೀಡಾಕೂಟದಲ್ಲಿ ವಿಜೇತರಾದ 1200 ಕ್ರೀಡಾಪಟುಗಳು ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿರುತ್ತಾರೆ. | ಕ್ರೀಡಾಕೂಟ ಸಂಘಟನೆ ಮತ್ತು ಭಾಗವಹಿಸುವ ಎಲ್ಲಾ ಕ್ರೀಡಾಪಟುಗಳಿಗೆ ಹೋಗಿ ಬರುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಪಾವತಿಸಲಾಗಿದೆ. |
| 03 | ಜಿಲ್ಲಾ ಮಟ್ಟದ ಯುವಜನ ಮೇಳ ಸಂಘಟನೆ | 2,50,000-00 | ಹಾಸನ ಜಿಲ್ಲೆಯ ಎಲ್ಲಾ 8 ತಾಲ್ಲೂಕುಗಳ 1800 ಕಲಾವಿದರು ಜಿಲ್ಲಾ ಯುವಜನ ಮೇಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುತ್ತಾರೆ. | ಯುವಜನ ಮೇಳ ಸಂಘಟನೆಗೆ ವೆಚ್ಚ ಭರಿಸಲಾಗಿದೆ. ಮತ್ತು ಭಾಗವಹಿಸುವ ಎಲ್ಲಾ ಸ್ಪರ್ಧಾಳುಗಳಿಗೆ ಹೋಗಿ ಬರುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಪಾವತಿಸಲಾಗಿದೆ. |
| 04 | ವಿಭಾಗ ಮಟ್ಟದ ಯುವಜನ ಮೇಳ ಕಾರ್ಯಕ್ರಮ ಸಂಘಟನೆ | 3,00,000-00 | ಮೈಸೂರು ವಿಭಾಗದ ಎಲ್ಲಾ ಜಿಲ್ಲೆಗಳಿಂದ ವಿಜೇತರಾದ 1800 ಸ್ಪರ್ಧಾಳುಗಳು ಭಾಗವಹಿಸಿರುತ್ತಾರೆ. | ವಿಭಾಗ ಮಟ್ಟದ ಯುವಜನ ಮೇಳ ಸಂಘಟನೆಗೆ ವೆಚ್ಚ ಭರಿಸಲಾಗಿದೆ. ಮತ್ತು ಭಾಗವಹಿಸುವ ಎಲ್ಲಾ ಸ್ಪರ್ಧಾಳುಗಳಿಗೆ ಹೋಗಿ ಬರುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಪಾವತಿಸಲಾಗಿದೆ. |
| 05 | ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮ | 50,000-00 | ನೇರವಾಗಿ ಎಲ್ಲಾ ತಾಲೂಕುಗಳ 1200 ಸ್ಪರ್ಧಾಳುಗಳು ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿರುತ್ತಾರೆ. | ಯುವಜನೋತ್ಸವ ಕಾರ್ಯಕ್ರಮ ಸಂಘಟನೆಗೆ ವೆಚ್ಚ ಭರಿಸಲಾಗಿದೆ. ಮತ್ತು ಭಾಗವಹಿಸುವ ಎಲ್ಲಾ ಸ್ಪರ್ಧಾಳುಗಳಿಗೆ ದಿನಭತ್ಯೆ ಪಾವತಿಸಲಾಗಿದೆ. |
| 06 | ಯುವ ಸಮ್ಮೇಳನ ಕಾರ್ಯಾಗಾರ, ಯುವ ಪ್ರಶಸ್ತಿ | 1,00,000-00 | ಹಾಸನ ಜಿಲ್ಲೆಯ ವಿವಿಧ ಸಂಘ-ಸಂಸ್ಥೆಗಳಿಂದ ಸ್ವಾಮಿ ವಿವೇಕಾನಂದ ಜನ್ಮ ಶತಾಬ್ದಿ ಆಚರಣೆಯಲ್ಲಿ 400 ಸ್ಪರ್ಧಾಳುಗಳು ಭಾಗವಹಿಸಿರುತ್ತಾರೆ. | ಹಾಸನ ಜಿಲ್ಲೆಯ ವಿವಿಧ ಸಂಘ-ಸಂಸ್ಥೆಗಳಿಂದ ಸ್ವಾಮಿ ವಿವೇಕಾನಚಿದ ಜನ್ಮ ಶತಾಬ್ದಿ ಆಚರಣೆಗಾಗಿ ವೆಚ್ಚ ಭರಿಸಲಾಗಿದೆ. ಭಾಗವಹಿಸುವ ಎಲ್ಲಾ ಸ್ಪರ್ಧಾಳುಗಳಿಗೆ ದಿನಭತ್ಯೆ ಪಾವತಿಸಲಾಗಿದೆ. |
| 07 | 18 ಹೋಬಳಿ ಮಟ್ಟದಲ್ಲಿ ಗ್ರಾಮೀಣ ಕ್ರೀಡೋತ್ಸವ | 9,00,000-00 | ಪ್ರತಿ ಹೋಬಳಿಗೆ ಗ್ರಾಮೀಣ ಕ್ರೀಡೋತ್ಸವದಲ್ಲಿ 200 ಕ್ರೀಡಾಪಟುಗಳು ಭಾಗವಹಿಸಿರುತ್ತಾರೆ. | 18 ಹೋಬಳಿ ಮಟ್ಟದಲ್ಲಿ ಗ್ರಾಮೀಣ ಕ್ರೀಡೋತ್ಸವ ಸಂಘಟನೆಗಾಗಿ ವೆಚ್ಚ ಭರಿಸಲಾಗಿದೆ. ಭಾಗವಹಿಸುವ ಸ್ಪರ್ಧಾಳು ಗಳಿಗೆ ದಿನಭತ್ಯೆ |

| | | | | |
|---|---|---|---|---|
| | | | | ಪಾವತಿಸಲಾಗಿದೆ. |
| 08 | ಅಂಗವಿಕಲರ ಕ್ರೀಡಾಕೂಟ | 1,00,000-00 | ಹಾಸನ ಜಿಲ್ಲೆಯಲ್ಲಿ ನಡೆದ ಅಂಗವಿಕಲರ ಕ್ರೀಡಾ ಕೂಟದ ವಿಜೇತರಿಗೆ ಬಹುಮಾನ ನೀಡಲಾಗಿರುತ್ತದೆ | ಸುಮಾರು 400 ಬಹುಮಾನ ಖರೀದಿಸಿ ನೀಡಲಾಗಿರುತ್ತದೆ. |
| 09 | ಸರ್ಕಾರಿ ನೌಕರರ ಕ್ರೀಡಾಕೂಟ | 50,000-00 | ಹಾಸನ ಜಿಲ್ಲೆಯಲ್ಲಿ ಸರ್ಕಾರಿ ನೌಕರರ ಕ್ರೀಡಾಕೂಟ ಸಂಘಟಿಸಲಾಗಿದೆ. | ಸಂಘಟನೆ, ಬಹುಮಾನ, ಪ್ರಮಾಣ ಪತ್ರ, ಸಲಕರಣೆ ಇತ್ಯಾದಿ |
| | | **2016-17** | | |
| 1 | ತಾಲೂಕಾ ದಸರಾ ಕ್ರೀಡಾಕೂಟಗಳು; ಪ್ರತಿ ತಾಲೂಕಿಗೆ .ತಲಾ ರೂ 20,000-00 ಗಳಂತೆ ಅನುದಾನ ಹಂಚಿಕೆ ಮಾಡಲಾಗಿದೆ. | 1,60,000-00 | ಪ್ರತಿ ತಾಲೂಕಿನಲ್ಲಿ ದಸರಾ ಕ್ರೀಡಾಕೂಟಕ್ಕೆ ಅಂದಾಜು 300 ಕ್ರೀಡಾಪಟುಗಳು ಭಾಗವಹಿಸಿರುತ್ತಾರೆ. | ಕ್ರೀಡಾಕೂಟ ಸಂಘಟನೆಗಾಗಿ ವೆಚ್ಚ ಭರಿಸಲಾಗಿದೆ. |
| 2 | ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ | 2,50,000-00 | ಪ್ರತಿ ತಾಲೂಕಿನ ದಸರಾ ಕ್ರೀಡಾಕೂಟದಲ್ಲಿ ವಿಜೇತರಾದ 1200 ಕ್ರೀಡಾಪಟುಗಳು ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿರುತ್ತಾರೆ. | ಕ್ರೀಡಾಕೂಟ ಸಂಘಟನೆ ಮತ್ತು ಭಾಗವಹಿಸುವ ಎಲ್ಲಾ ಕ್ರೀಡಾಪಟುಗಳಿಗೆ ಹೋಗಿ ಬರುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಪಾವತಿಸಲಾಗಿದೆ. |
| 3 | ಜಿಲ್ಲಾ ಮಟ್ಟದ ಯುವಜನ ಮೇಳ ಸಂಘಟನೆ | 2,50,000-00 | ಪ್ರತಿ ತಾಲೂಕಿನ ಯುವಜನ ಮೇಳ ಕಾರ್ಯಕ್ರಮಗಳಲ್ಲಿ ವಿಜೇತರಾದ 1800 ರಿಂದ 2000 ಸ್ಪರ್ಧಾಳುಗಳು ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿರುತ್ತಾರೆ. | ಯುವಜನ ಮೇಳ ಸಂಘಟನೆಗೆ ವೆಚ್ಚ ಭರಿಸಲಾಗಿದೆ. ಮತ್ತು ಭಾಗವಹಿಸುವ ಎಲ್ಲಾ ಸ್ಪರ್ಧಾಳುಗಳಿಗೆ ಹೋಗಿ ಬರುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಪಾವತಿಸಲಾಗಿದೆ. |
| 4 | ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮ | 50,000-00 | ನೇರವಾಗಿ ಎಲ್ಲಾ ತಾಲೂಕುಗಳ 1200 ರಿಂದ 1400 ಸ್ಪರ್ಧಾಳುಗಳು ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿರುತ್ತಾರೆ. | ಯುವಜನೋತ್ಸವ ಕಾರ್ಯಕ್ರಮ ಸಂಘಟನೆಗೆ ವೆಚ್ಚ ಭರಿಸಲಾಗಿದೆ. ಮತ್ತು ಭಾಗವಹಿಸುವ ಎಲ್ಲಾ ಸ್ಪರ್ಧಾಳುಗಳಿಗೆ ದಿನಭತ್ಯೆ ಪಾವತಿಸಲಾಗಿದೆ. |
| 5 | ಅಂಗವಿಕಲರ ಕ್ರೀಡಾಕೂಟ | 1,00,000-00 | ಹಾಸನ ಜಿಲ್ಲೆಯಲ್ಲಿ ನಡೆದ ಅಂಗವಿಕಲರ ಕ್ರೀಡಾಕೂಟದ ವಿಜೇತರಿಗೆ ಬಹುಮಾನ ನೀಡಲಾಗಿರುತ್ತದೆ. | ಸುಮಾರು 400 ಬಹುಮಾನ ಖರೀದಿಸಿ ನೀಡಲಾಗಿರುತ್ತದೆ. |
| 6 | ಸರ್ಕಾರಿ ನೌಕರರ ಕ್ರೀಡಾಕೂಟ | 50,000-00 | ಹಾಸನ ಜಿಲ್ಲೆಯಲ್ಲಿ ಸರ್ಕಾರಿ ನೌಕರರ ಕ್ರೀಡಾಕೂಟ ಸಂಘಟಿಸಲಾಗಿದೆ. | ಸಂಘಟನೆ, ಬಹುಮಾನ, ಪ್ರಮಾಣ ಪತ್ರ, ಸಲಕ್ಕರಣೆ ಇತ್ಯಾದಿ |
| | | **2017-18** | | |
| 1 | ತಾಲೂಕಾ ದಸರಾ ಕ್ರೀಡಾಕೂಟಗಳು ಪ್ರತಿ ತಾಲೂಕಿಗೆ ತಲಾ ರೂ.20,000-00 ಗಳಂತೆ | 1,60,000-00 | ಪ್ರತಿ ತಾಲೂಕಿನಲ್ಲಿ ದಸರಾ ಕ್ರೀಡಾಕೂಟಕ್ಕೆ 300 ರಿಂದ 400 ಕ್ರೀಡಾಪಟುಗಳು ಭಾಗವಹಿಸಿರುತ್ತಾರೆ. | ಕ್ರೀಡಾಕೂಟ ಸಂಘಟನೆಗಾಗಿ ವೆಚ್ಚ ಭರಿಸಲಾಗಿದೆ. |
| 2. | ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ | 2,50,000-00 | ಪ್ರತಿ ತಾಲೂಕಿನ ದಸರಾ ಕ್ರೀಡಾಕೂಟದಲ್ಲಿ ವಿಜೇತರಾದ 1200 ರಿಂದ 1400 | ಕ್ರೀಡಾಕೂಟ ಸಂಘಟನೆ ಮತ್ತು ಭಾಗವಹಿಸುವ್ವ ಎಲ್ಲಾ ಕ್ರೀಡಾಪಟುಗಳಿಗೆ ಹೋಗಿ ಬರುವ |

| | | | | |
|---|---|---|---|---|
| | | | ಕ್ರೀಡಾಪಟುಗಳು ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿರುತ್ತಾರೆ. | ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಪಾವತಿಸಲಾಗಿದೆ. |
| 3 | ವಿಭಾಗ ಮಟ್ಟದ ದಸರಾ ಕ್ರೀಡಾಕೂಟ | 50,000–00 | ಮೈಸೂರು ವಿಭಾಗದ ಜಿಲ್ಲೆಗಳ ವಿಜೇತ ಕ್ರೀಡಾಪಟುಗಳು ಭಾಗವಹಿಸಿರುತ್ತಾರೆ. | ಕ್ರೀಡಾಕೂಟ ಸಂಘಟನೆ ಮತ್ತು ಭಾಗವಹಿಸುವ ಎಲ್ಲಾ ಕ್ರೀಡಾಪಟುಗಳಿಗೆ ಹೋಗಿ ಬರುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಪಾವತಿಸಲಾಗಿದೆ. |
| 4 | ಜಿಲ್ಲಾ ಯುವಜನ ಮೇಳ ಸಂಘಟನೆ | 2,50,000–00 | ಪ್ರತಿ ತಾಲೂಕಿನ ಯುವಜನ ಮೇಳ ಕಾರ್ಯಕ್ರಮಗಳಲ್ಲಿ ವಿಜೇತರಾದ 1800 ರಿಂದ 2000 ಸ್ಪರ್ಧಾಳುಗಳು ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿರುತ್ತಾರೆ. | ಯುವಜನ ಮೇಳ ಸಂಘಟನೆಗೆ ವೆಚ್ಚ ಭರಿಸಲಾಗಿದೆ. ಮತ್ತು ಭಾಗವಹಿಸುವ ಎಲ್ಲಾ ಸ್ಪರ್ಧಾಳುಗಳಿಗೆ ಹೋಗಿ ಬರುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಪಾವತಿಸಲಾಗಿದೆ. |
| 5 | ಅಂಗವಿಕಲರ ಕ್ರೀಡಾಕೂಟ | 1,00,000–00 | ಹಾಸನ ಜಿಲ್ಲೆಯಲ್ಲಿ ನಡೆದ ಅಂಗವಿಕಲರ ಕ್ರೀಡಾಕೂಟದ ವಿಜೇತರಿಗೆ ಬಹುಮಾನ ನೀಡಲಾಗಿರುತ್ತದೆ | ಸುಮಾರು 400 ಬಹುಮಾನ ಖರೀದಿಸಿ ನೀಡಲಾಗಿರುತ್ತದೆ. |
| 6 | ಸರ್ಕಾರಿ ನೌಕರರ ಕ್ರೀಡಾಕೂಟ | 50,000–00 | ಹಾಸನ ಜಿಲ್ಲೆಯಲ್ಲಿ ಸರ್ಕಾರಿ ನೌಕರರ ಕ್ರೀಡಾಕೂಟ ಸಂಘಟಿಸಲಾಗಿದೆ. | ಸಂಘಟನೆ, ಬಹುಮಾನ, ಪ್ರಮಾಣ ಪತ್ರ, ಸಲಕರಣೆ ಇತ್ಯಾದಿ |
| 7 | ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮ | 50,000–00 | ನೇರವಾಗಿ ಎಲ್ಲಾ ತಾಲೂಕುಗಳ ಸುಮಾರು 1200 ರಿಂದ 1400 ಸ್ಪರ್ಧಾಳುಗಳು ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿರುತ್ತಾರೆ. | ಯುವಜನೋತ್ಸವ ಕಾರ್ಯಕ್ರಮ ಸಂಘಟನೆಗೆ ವೆಚ್ಚ ಭರಿಸಲಾಗಿದೆ. ಮತ್ತು ಭಾಗವಹಿಸುವ ಎಲ್ಲಾ ಸ್ಪರ್ಧಾಳುಗಳಿಗೆ ದಿನಭತ್ಯೆ ಪಾವತಿಸಲಾಗಿದೆ. |
| 8 | ಹೋಬಳಿ ಮಟ್ಟದಲ್ಲಿ ಗ್ರಾಮೀಣ ಕ್ರೀಡೋತ್ಸವ ಸಂಘಟನೆ | 11,50,000–00 | ಆಯಾ ಹೋಬಳಿ ಮಟ್ಟದ ಸುಮಾರು ಅಂದಾಜು 2000 ಗ್ರಾಮೀಣ ಸ್ಪರ್ಧಾಳುಗಳು ಭಾಗವಹಿಸಿರುತ್ತಾರೆ. | 23 ಹೋಬಳಿ ಮಟ್ಟದಲ್ಲಿ ಗ್ರಾಮೀಣ ಕ್ರೀಡೋತ್ಸವ ಸಂಘಟನೆಗಾಗಿ ಪ್ರತಿ ಕೇಂದ್ರಕ್ಕೆ ರೂ 50,000/- ವೆಚ್ಚ ಭರಿಸಲಾಗಿದೆ. ಭಾಗವಹಿಸುವ ಎಲ್ಲಾ ಸ್ಪರ್ಧಾಳುಗಳಿಗೆ ದಿನಭತ್ಯೆ ಪಾವತಿಸಲಾಗಿದೆ. |

## ಅನುಬಂಧ-2 (ಬಿ)

## ಹಾಸನ ಜಿಲ್ಲೆಯಲ್ಲಿ ಕಳೆದ 03 ವರ್ಷಗಳಲ್ಲಿ ಆಯೋಜಿಸಲಾದ ಪ್ರಮುಖ ಕಾರ್ಯಕ್ರಮಗಳು ಹಾಗೂ ವೆಚ್ಚದ ವಿವರ

'ಯುವ ಕ್ರೀಡಾ ಮಿತ್ರ' ಕಾರ್ಯಕ್ರಮವನ್ನು 2015-16 ಹಾಗೂ 2016-17 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗಿದ್ದು, ತಲಾ ರೂ 25,000/- ವೆಚ್ಚದಲ್ಲಿ ಕ್ರೀಡಾ ಕಿಟ್ ವಿತರಿಸಲಾಗಿದ್ದು, ಫಲಾನುಭವಿ ಸಂಘ-ಸಂಸ್ಥೆಗಳ ವಿವರ

| ಕ್ರಸ | ಸಂಘದ ಹೆಸರು | ತಾಲ್ಲೂಕು |
|---|---|---|
| | 2015-16 | |
| 1 | ಸರಸ್ವತಿ ಫುಟ್ಬಾಲ್ ಅಸೋಸಿಯೇಷನ್, ಹಾಸನ | ಹಾಸನ |
| 2 | ಹಾಸನ ಜಿಲ್ಲಾ ವಾಲಿಬಾಲ್ ಸಂಸ್ಥೆ, ಹಾಸನ | ಹಾಸನ |
| 3 | ಹಾಸನಾಂಬ ಖೋಖೋ ಕ್ಲಬ್, ಹಾಸನ | ಹಾಸನ |
| 4 | ಹಾಸನ ಜಿಲ್ಲಾ ಅಂಗವಿಕಲ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ | ಹಾಸನ |
| 5 | ಹಾಸನ ಫ್ರೆಂಡ್ಸ್ ಬಾಲ್-ಬ್ಯಾಡ್ಮಿಂಟನ್ ಕ್ಲಬ್ | ಹಾಸನ |
| 6 | ಅಥ್ಲೆಟಿಕ್ಸ್ ಕ್ಲಬ್, ಹಾಸನ | ಹಾಸನ |
| 7 | ಹಾಸನ ಜಿಲ್ಲಾ ಜಿಮ್ನಾಸ್ಟಿಕ್ಸ್ ಸಂಸ್ಥೆ | ಹಾಸನ |
| 8 | ಹಾಸನ ಜಿಲ್ಲಾ ಹಿರಿಯರ ಕ್ರೀಡಾ ಸಂಸ್ಥೆ, ಹಾಸನ | ಹಾಸನ |
| 9 | ಏಕಲವ್ಯ ಕ್ರೀಡಾ ಕ್ಲಬ್, ಹಾಸನ | ಹಾಸನ |
| 10 | ಹಾಸನ ನೆಟ್‌ಬಾಲ್ ಅಸೋಸಿಯೇಷನ್, ಹಾಸನ | ಹಾಸನ |
| 11 | ಹೊಯ್ಸಳ ಬಾಸ್ಕೆಟ್‌ಬಾಲ್ ಕ್ಲಬ್ | ಹಾಸನ |
| 12 | ಹಾಕಿ ಹಾಸನ ಸಂಸ್ಥೆ | ಹಾಸನ |
| | 2016-17 | |
| 01. | ಯಂಗ್‌ಸ್ಟರ್ಸ್ ವಾಲಿಬಾಲ್ ಕ್ಲಬ್, ನುಗ್ಗೆಹಳ್ಳಿ, | ಚನ್ನರಾಯಪಟ್ಟಣ |
| 02. | ಡಾ: ಬಿ.ಆರ್.ಅಂಬೇಡ್ಕರ್ ಯುವಕರ ಕ್ರೀಡಾ ಸಂಘ, ಕರಗುಂದ, | ಅರಸೀಕೆರೆ |
| 03. | ಹೊಯ್ಸಳ ಕ್ರೀಡಾ ಸಂಘ. ಬ್ಯಾಲದ ಕೆರೆ | ಅರಸೀಕೆರೆ |
| 04. | ಬೇಲೂರು ತಾಲ್ಲೂಕು ಡಾ: ಬಿ.ಆರ್. ಅಂಬೇಡ್ಕರ್ ವಾಲಿಬಾಲ್ ಸಂಸ್ಥೆ, | ಬೇಲೂರು |
| 05. | ಸ್ವಾಮಿ ವಿವೇಕಾನಂದ ಯುವಕರ ಸಂಘ, ಬಂದೂರು | ಅರಸೀಕೆರೆ |
| 06. | ಜಿಲ್ಲಾ ಅಮೆಚೂರು ಬಾಡಿ ಬಿಲ್ಡರ್ಸ್ ಸಂಸ್ಥೆ, ಹಾಸನ | ಹಾಸನ |
| 07. | ಕುಂಬಾರ ಮಹಿಳಾ ಸಂಘ, ಕುಂಬಾರ ಬೀದಿ | ಹಾಸನ |
| 08. | ಹಾಸನ ಸಾಂಸ್ಕೃತಿಕ ಯುವಕ ಸಂಘ, ಹಾಸನ | ಹಾಸನ |
| 09. | ಜೀವನ್ಮುಖಿ ಯುವತಿ ಮಂಡಳಿ, ಅರಸೀಕೆರೆ | ಅರಸೀಕೆರೆ |
| 10. | ಲಕ್ಷ್ಮೀ ಯುವತಿ ಮಂಡಳಿ, ಶಾಂತಿಗ್ರಾಮ | ಹಾಸನ |
| 11 | ಹೊಯ್ಸಳ ಜಾನಪದ ಕಲಾ ಸಂಸ್ಥೆ, | ಹಾಸನ |
| 12 | ವೀರಭದ್ರೇಶ್ವರ ಯುವಕ ಸಂಘ, ಚನ್ನರಾಯಪಟ್ಟಣ | ಚನ್ನರಾಯಪಟ್ಟಣ |
| 13 | ನಿರಂತರ ಸಾಂಸ್ಕೃತಿಕ ಮತ್ತು ಕ್ರೀಡಾ ಸಂಘ, ದೊಡ್ಡಬೀಕನಹಳ್ಳಿ | ಹಾಸನ |
| 14 | ಅಂಬೇಡ್ಕರ್ ಯುವತಿ ಮಂಡಳಿ, ಹ್ಯಾರಾನೆ | ಹಾಸನ |
| 15 | ಮಾನಸ ಯುವತಿ ಮಂಡಳಿ, ಕಬ್ಬತ್ತಿ | ಹಾಸನ |
| 16 | ಮುಕ್ಕಣ್ಣೇಶ್ವರಿ ಯುವತಿ ಮಂಡಳಿ. ರಾಂಪುರ | ಅರಸೀಕೆರೆ |
| 17 | ಸುಗ್ಗಿ-ಹುಗ್ಗಿ ಸಾಂಸ್ಕೃತಿಕ ಯುವಕ ಸಂಘ, | ಹಾಸನ |
| 18 | ರಂಗಸ್ವಾಮಿ ಯುವತಿ ಮಂಡಳಿ, ತಲ್ಲಪುರ | ಹಾಸನ |
| 19 | ಬೀದಿ ನಾಟಕ ಕಲಾ ತಂಡ | ಹಾಸನ |
| 20 | ನೇತಾಜಿ ಯುವಕ ಸಂಘ, ಲಕ್ಷ್ಮೀಪುರ | ಹಾಸನ |
| 21 | ಅರಸೀ ಸಾಂಸ್ಕೃತಿಕ ವೇದಿಕೆ | ಅರಸೀಕೆರೆ |
| 22 | ಜಿಲ್ಲಾ ಯುವಜನ ಯುವಕರ ಸಂಘ. ಹಾಸನ | ಹಾಸನ |

| | | |
|---|---|---|
| 23 | ಮಹೇಶ್ವರಿ ಯುವತಿ ಮಂಡಳಿ. | ಅರಕಲಗೂಡು |
| 24 | ತಾಲ್ಲೂಕು ದಲಿತ ಸಂಘಟನೆಗಳ ಒಕ್ಕೂಟ | ಸಕಲೇಶಪುರ |
| 25 | ಅಂಬೇಡ್ಕರ್ ಯುವಕ ಸಂಘ, ಪಡುವಲಹಿಪ್ಪೆ | ಹೊಳೆನರಸೀಪುರ |
| 26 | ಶ್ರೀ ಲಕ್ಷ್ಮೀ ಯುವತಿ ಮಂಡಳಿ, ದೊಡ್ಡಮೇಟಿಕುರ್ಕೆ, | ಅರಸೀಕೆರೆ |
| 27 | ಅಂಬೇಡ್ಕರ್ ಯುವಕ ಸಂಘ, ಅರೇಹಳ್ಳಿ, | ಬೇಲೂರು |
| 28 | ಜಿಲ್ಲಾ ಯುವಜನ ಕಲಾ ಸಂಘ | ಹಾಸನ |
| 29 | ರಂಗಸ್ವಾಮಿ ಸ್ವ-ಸಹಾಯ ಸಂಘ, ಕಾಂತರಾಜಪುರ | ಚನ್ನರಾಯಪಟ್ಟಣ |
| 30 | ಯುವಜನ ಒಕ್ಕೂಟ ಹಾಸನ | ಹಾಸನ |

## ಅನುಬಂಧ-2 (ಸಿ)

## ಹಾಸನ ಜಿಲ್ಲೆಯಲ್ಲಿ ಕಳೆದ 03 ವರ್ಷಗಳಲ್ಲಿ ಆಯೋಜಿಸಲಾದ ಪ್ರಮುಖ ಕಾರ್ಯಕ್ರಮಗಳು ಹಾಗೂ ವೆಚ್ಚದ ವಿವರ

'ನಮ್ಮೂರ ಶಾಲೆಗೆ ನಮ್ಮ ಯುವಜನರು' ಕಾರ್ಯಕ್ರಮವನ್ನು 2015-16 ಮತ್ತು 2017-18 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಫಲಾನುಭವಿ ಸಂಸ್ಥೆಗಳ ವಿವರ

| ಕ್ರಸ | ಶಾಲೆ/ಸಂಘದ ಹೆಸರು ಮತ್ತು ವಿಳಾಸ | ತಾಲ್ಲೂಕು | ಅನುದಾನದ ಮೊತ್ತ (ರೂ.ಗಳಲ್ಲಿ) |
|---|---|---|---|
| | 2015-16 | | |
| 1 | ಹಾಸನ ಸಾಂಸ್ಕೃತಿಕ ಸಂಘ | ಹಾಸನ | 1,00,000 |
| 2 | ಹೊಯ್ಸಳ ಜನಪದ ಕಲಾ ಸಂಸ್ಥೆ | ಆಲೂರು | 1,00,000 |
| 3 | ನೇತಾಜಿ ಯುವಕ ಸಂಘ, ಹಾಸನ | ಸಕಲೇಶಪುರ | 1,00,000 |
| 4 | ಜೀವನ್ಮುಖಿ ಮಹಿಳಾ ಸಂಘ, ಅರಸೀಕೆರೆ | ಅರಸೀಕೆರೆ | 1,00,000 |
| 5 | ಸಿ.ವಿ.ಕೆ.ಎಲ್.ಸ್ವಯಂ ಸೇವಾ ಸಂಸ್ಥೆ, | ಚನ್ನರಾಯಪಟ್ಟಣ | 1,00,000 |
| 6 | ಸ್ನೇಹಾ ಮಹಿಳಾ ಸಂಘ, ದೇವೆಗೌಡನಗರ | ಬೇಲೂರು | 1,00,000 |
| 7 | ಅಂಬೇಡ್ಕರ್ ಯುವಕ ಸಂಘ, ದೊಡ್ಡಬ್ಯಾಗತವಳ್ಳಿ | ಹೊಳೆನರಸೀಪುರ | 1,00,000 |
| 8 | ಜಿಲ್ಲಾ ಯುವಕ ಸಂಘ, ಹಾಸನ | ಅರಕಲಗೂಡು | 1,00,000 |
| | 2017-18 | | |
| 01 | ಸರ್ಕಾರಿ ಪದವಿಪೂರ್ವ ಕಾಲೇಜು(ಪ್ರೌಡಶಾಲಾ ವಿಭಾಗ, ಮಳಲಿ | ಹೊಳೆನರಸೀಪುರ | 1,00,000-00 |
| 02. | ಸರ್ಕಾರಿ ಉನ್ನತ ಪ್ರಾಥಮಿಕ ಶಾಲೆ, ಹಗರೆ | ಬೇಲೂರು | 1,00,000-00 |
| 03. | ಸರ್ಕಾರಿ ಪ್ರೌಡಶಾಲೆ, ಬಾಗೇಶಪುರ | ಅರಸೀಕೆರೆ | 1,00,000-00 |
| 04. | ಸರ್ಕಾರಿ ಪ್ರೌಡಶಾಲೆ, ಚಿಕ್ಕಕಣಗಾಲು, | ಆಲೂರು | 1,00,000-00 |
| 05. | ಸರ್ಕಾರಿ ಪ್ರೌಡಶಾಲೆ,ಆದರವಳ್ಳಿ, | ಸಕಲೇಶಪುರ | 1,00,000-00 |
| 06. | ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ. ಸಾರಾಪುರ | ಹಾಸನ | 1,00,000-00 |
| 07 | ಸರ್ಕಾರಿ ಪ್ರೌಡಶಾಲೆ,(ಹೊಸದು) ಬಿ.ಇ.ಒ.ಕಚೇರಿ ಹಿಂಭಾಗ | ಚನ್ನರಾಯಪಟ್ಟಣ | 1,00,000-00 |

## ಅನುಬಂಧ-2 (ಡಿ)

## ಹಾಸನ ಜಿಲ್ಲೆಯಲ್ಲಿ ಕಳೆದ 03 ವರ್ಷಗಳಲ್ಲಿ ಆಯೋಜಿಸಲಾದ ಪ್ರಮುಖ ಕಾರ್ಯಕ್ರಮಗಳು ಹಾಗೂ ವೆಚ್ಚದ ವಿವರ

### 1. 'ಯುವ ಶಕ್ತಿ ಸಂಘ' ಯೋಜನೆಯನ್ನು 2017-18 ನೇ ಸಾಲಿನಲ್ಲಿ ಆರಂಭಿಸಿ ಅನುಷ್ಠಾನಗೊಳಿಸಲಾಗಿದ್ದು, ಫಲಾನುಭವಿ ಸಂಘಗಳ ವಿವರ

| ಕ್ರಸ | ಶಾಲೆಯ ಹೆಸರು ಮತ್ತು ವಿಳಾಸ | ತಾಲ್ಲೂಕು | ಸುತ್ತು ನಿಧಿ ಮೊತ್ತ (ರೂ.ಗಳಲ್ಲಿ) |
|---|---|---|---|
| 01 | ಹೊಯ್ಸಳ ಜಾನಪದ ಕಲಾ ಸಂಘ, ಲಕ್ಷ್ಮೀಪುರ ಬಡಾವಣೆ, ಹಾಸನ | ಹಾಸನ | 5,00,000-00 |
| 02. | ನೇತಾಜಿ ಯುವಕ ಸಂಘ, ಲಕ್ಷ್ಮೀಪುರ ಬಡಾವಣೆ, ಹಾಸನ | ಹಾಸನ | 5,00,000-00 |
| 03. | ನಿರಂತರ ಸಾಂಸ್ಕೃತಿಕ ಮತ್ತು ಕ್ರೀಡಾ ಸಂಘ, ದೊಡ್ಡಬೀಕನ ಹಳ್ಳಿ, ಹಾಸನ ತಾಲ್ಲೂಕು | ಸಕಲೇಶಪುರ | 5,00,000-00 |
| 04. | ಸುಗ್ಗಿ ಹುಗ್ಗಿ ಸಾಂಸ್ಕೃತಿಕ ಯುವಕ ಸಂಘ, ದೊಡ್ಡಕಣಗಾಲು, ಆಲೂರು ತಾಲ್ಲೂಕು | ಆಲೂರು | 5,00,000-00 |

2. 'ಯುವ ಶಕ್ತಿ ಕೇಂದ್ರ' ಕಾರ್ಯಕ್ರಮದ ಅನುಷ್ಠಾನದ ಅಂಗವಾಗಿ 2015-16 ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಡುವಲಹಿಪ್ಪೆ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ ಇಲ್ಲಿ ಸುಸಜ್ಜಿತ ಜಿಮ್ ಅಳವಡಿಸಲಾಗಿದೆ.

## ಅನುಬಂಧ-2 (ಇ)

## ಹಾಸನ ಜಿಲ್ಲೆಯಲ್ಲಿ ಕಳೆದ 03 ವರ್ಷಗಳಲ್ಲಿ ಆಯೋಜಿಸಲಾದ ಪ್ರಮುಖ ಕಾರ್ಯಕ್ರಮಗಳು ಹಾಗೂ ವೆಚ್ಚದ ವಿವರ

## 'ಯುವ ಚೈತನ್ಯ' ಯೋಜನೆಯನ್ನು 2017-18 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಫಲಾನುಭವಿ ಸಂಘಗಳ ವಿವರ

| ಕ್ರ.ಸಂ | ಯುವಕ ಸಂಘದ ಹೆಸರು ಮತ್ತು ವಿಳಾಸ | ತಾಲ್ಲೂಕು |
|---|---|---|
| 01 | ಶ್ರೀ.ವೀರಭದ್ರೇಶ್ವರ ಯುವಕ ಸಂಘ, ಚನ್ನಂಗೀಹಳ್ಳಿ, ಕಟ್ಟಾಯ ಹೋಬಳಿ, ಹಾಸನ ತಾಲ್ಲೂಕು | ಹಾಸನ |
| 02 | ಸರಸ್ವತಿ ಫುಟ್ಬಾಲ್ ಕ್ಲಬ್, ಕೇರ್/ಆಫ್ ದಿಶಾ ಕಮ್ಯೂನಿಕೇಷನ್ ಸಾಲಗಾಮೆ ರಸ್ತೆ, ಹಾಸನ | ಹಾಸನ |
| 03 | ಶ್ರೀ.ಹೆಚ್.ಡಿ.ದೇವೇಗೌಡ ಯುವಕರ ಸಂಘ, ಚನ್ನಂಗಿಹಳ್ಳಿ, ಕಟ್ಟಾಯ ಹೋಬಳಿ, ಹಾಸನ | ಹಾಸನ |
| 04 | ಹೊಯ್ಸಳ ಜಾನಪದ ಕಲಾ ಸಂಸ್ಥೆ, ಲಕ್ಷ್ಮೀಪುರಂ ಬಡಾವಣೆ, ಹಾಸನ | ಹಾಸನ |
| 05 | ಜಿಲ್ಲಾ ಯುವಜನ ಯುವಕರ ಸಂಘ(ರಿ), ಹಾಸನ | ಹಾಸನ |
| 06 | ಸುಗ್ಗಿ-ಹುಗ್ಗಿ ಸಾಂಸ್ಕೃತಿಕ ಯುವಕ ಸಂಘ(ರಿ), ಹಾಸನ | ಹಾಸನ |
| 07 | ಹಾಸನ ಸಾಂಸ್ಕೃತಿಕ ಯುವಕ ಸಂಘ(ರಿ), ಕುಂಬಾರ ಬೀದಿ, ಲಕ್ಷ್ಮೀಪುರ ಪಕ್ಕ ಹಾಸನ | ಹಾಸನ |
| 08 | ಬೀದಿ ನಾಟಕ ಕಲಾ ತಂಡ(ರಿ), ಕಂದಲಿ, ಕಸಬಾ ಹೋಬಳಿ | ಹಾಸನ |
| 09 | ನಿರಂತರ ಸಾಂಸ್ಕೃತಿಕ ಮತ್ತು ಕ್ರೀಡಾ ಸಂಘ, ಸಮುದಾಯ ಭವನ ದೊಡ್ಡಬೀಕನಹಳ್ಳಿ, ಹಾಸನ | ಹಾಸನ |
| 10 | ನೇತಾಜಿ ಯುವಜನೇತರ ಸಂಘ(ರಿ), ಲಕ್ಷ್ಮೀಪುರಂ ಬಡಾವಣೆ, ಹಾಸನ | ಹಾಸನ |
| 11 | ಸ್ನೇಹಾ ಮಹಿಳಾ ಸ್ವಸಹಾಯ ಸಂಘ, ದೇವೇಗೌಡನಗರ, ತಟ್ಟೆಕೆರೆ ಅಂಚೆ, ಹಾಸನ | ಹಾಸನ |
| 12 | ಪ್ರಗತಿ ಗ್ರಾಮೀಣ ಯುವಕ ಅಭಿವೃದ್ಧಿ ಸಂಘ, ಕಂಚಮಾರನಹಳ್ಳಿ, ತೇಜೂರು ಹೋಬಳಿ, ಹಾಸನ | ಹಾಸನ |
| 13 | ಹಾಸನ ಜಿಲ್ಲಾ ಹಿರಿಯರ ಕ್ರೀಡಾ ಸಂಸ್ಥೆ, ಸಾಗರ ಫೋಟೋ ಸ್ಟುಡಿಯೋ, ಪಾರ್ಕ್ ರಸ್ತೆ, ಹಾಸನ | ಹಾಸನ |
| 14 | ಲಲಿತಾ ಜಾನಪದ ಕಲಾ ತಂಡ, ದೇವೇಗೌಡ ನಗರ, ತಟ್ಟೆಕೆರೆ ಅಂಚೆ, ಹಾಸನ | ಹಾಸನ |
| 15 | ಹೇಮಾವತಿ ಮಹಿಳಾ ಸಂಘ(ರಿ), ಬ್ರಾಹ್ಮಿ, ಹೇಮಾವತಿ ನಗರ, ಮಾಳವಿಕ ಶಾಲಾ ರಸ್ತೆ, ಹಾಸನ | ಹಾಸನ |
| 16 | ಹಾಸನ ನೆಟ್‌ಬಾಲ್ ಸಂಸ್ಥೆ, ನಂ:1482, ಹನುಮಂತಪುರ, ಹಾಸನ | ಹಾಸನ |
| 17 | ಜ್ಞಾನಸೂರ್ಯ ಯುವಕರ ಸಂಘ, ಹಾನುಬಾಳು, ಸಕಲೇಶಪುರ | ಸಕಲೇಶಪುರ |
| 18 | ಭೀಮಸೇನಾ ಅಭಿವೃದ್ಧಿ ಸಂಘ, ಕೌಡಳ್ಳಿ, ಸಕಲೇಶಪುರ | ಸಕಲೇಶಪುರ |
| 19 | ಶ್ರೀ.ಮುಕ್ಕಣ್ಣೇಶ್ವರಿ ಆರೋಗ್ಯ, ಶಿಕ್ಷಣ ಗ್ರಾಮೀಣಾಭಿವೃದ್ಧಿ ಕನ್ನಡ ಕಲಾ ಸಂಸ್ಥೆ ರಾಂಪುರ, ಅರಸೀಕೆರೆ | ಅರಸೀಕೆರೆ |
| 20 | ಡಾ.ಬಿ.ಆರ್.ಅಂಬೇಡ್ಕರ್ ಮಹಿಳಾ ಸಂಘ, ಕೆಸಗುಲಿ-ಮತಿಗಳಲಿ ಉದೇವಾರ ಅಂಚೆ, ಸಕಲೇಶಪುರ | ಸಕಲೇಶಪುರ |
| 21 | ಡಾ.ಬಿ.ಆರ್.ಅಂಬೇಡ್ಕರ್ ಮಹಿಳೆಯರ ಗ್ರಾಮಾಭಿವೃದ್ಧಿ ಸಂಘ, ಬಿರಡಳ್ಳಿ ಗ್ರಾಮ, ಕಸಬಾ ಹೋಬಳಿ, ಸಕಲೇಶಪುರ | ಸಕಲೇಶಪುರ |
| 22 | ಪರಿವರ್ತನ ಯುವಜನ ಸಂಘ(ರಿ) ಕೆಲಗಳಲೆ, ಸುಂದೆಕೆರೆ ಅಂಚೆ, ಸಕಲೇಶಪುರ | ಸಕಲೇಶಪುರ |
| 23 | ಅರಸೀ ಸಾಂಸ್ಕೃತಿಕ ವೇದಿಕೆ, ಸುಬ್ರಮಣ್ಯನಗರ, ಅರಸೀಕೆರೆ | ಅರಸೀಕೆರೆ |
| 24 | ಜೀವನ್ಮುಖಿ ಮಹಿಳಾ ಸಾಂಸ್ಕೃತಿಕ ಮತ್ತು ಸಮಾಜ ಸೇವಾ ಸಮಿತಿ, ಹೆಚ್.ಎಂ.ಎಸ್.ರಸ್ತೆ, ಲಕ್ಷ್ಮೀಪುರ, ಅರಸೀಕೆರೆ | ಅರಸೀಕೆರೆ |

| | | |
|---|---|---|
| 25 | ಶ್ರೀ.ವೈಭವ ಯುವತಿ ಸಾಂಸ್ಕೃತಿಕ ಸಮಾಜ ಸೇವಾ ಮಂಡಳಿ, ಮೊದಲಿಯಾರ್ ಬೀದಿ, ಅರಸೀಕೆರೆ | ಅರಸೀಕೆರೆ |
| 26 | ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಯುವಜನ ಸಂಘ(ರಿ), ದೇವಿಹಳ್ಳಿ, ಯಲಹಂಕ ಅಂಚೆ, ಹಳೆಬೀಡು ಹೋಬಳಿ, ಬೇಲೂರು | ಬೇಲೂರು |
| 27 | ಕರ್ನಾಟಕ ರಾಜ್ಯ ಛಲವಾದಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಯುವಜನ ಸಂಘ, ತೇಜೂರು ಗ್ರಾಮ ಮತ್ತು ಅಂಚೆ, ಕಸಬಾ ಹೋಬಳಿ, ಹಾಸನ | ಹಾಸನ |
| 28 | ಲಕ್ಷ್ಮೀದೇವಿ ಮಹಿಳಾ ಸಮಾಜ, ಶಾಂತಿಗ್ರಾಮ, ಹಾಸನ | ಹಾಸನ |
| 29 | ಹಾಸನ ಜಿಲ್ಲಾ ಅಂಗವಿಕಲರ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ(ರಿ), ನಂ:ಆರ್.ಹೆಚ್.ಎಸ್, ಪಿ.ಡಬ್ಲ್ಯೂ.ಡಿ. ಕಾಲೋನಿ ಹಿಂಭಾಗದ ರಸ್ತೆಮ ಗಂಗಾರಸ್ತೆ, 4ನೇ ಕ್ರಾಸ್, ಹಾಸನ | ಹಾಸನ |
| 30 | ಸುಭಾಷ್ ಯುವಜನೇತರ ಸಂಘ(ರಿ), ಅರೇಹಳ್ಳಿ, ಬೇಲೂರು | ಬೇಲೂರು |
| 31 | ಜೈಭೀಮ್ ಯುವಕರ ಸಂಘ, ಅತ್ನಿ ಗ್ರಾಮ, ಅರಕಲಗೂಡು | ಅರಕಲಗೂಡು |
| 32 | ಡಾ.ಬಾಬು ಜಗಜೀವನರಾಂ ಯುವಕ ಸಂಘ, ಗಾಂಧಿನಗರ, ಜಾವಗಲ್ ಹೋಬಳಿ, ಅರಸೀಕೆರೆ | ಅರಸೀಕೆರೆ |
| 33 | ಡಾ.ಬಿ.ಆರ್.ಅಂಬೇಡ್ಕರ್ ಯುವಕ ಸಂಘ, ಹೇಮಾವತಿ ನಗರ, ಹೊಳೆನರಸೀಪುರ | ಹೊಳೆನರಸೀಪುರ |
| 34 | ಜಾಗೃತಿ ಯುವ ಕಲಾ ತಂಡ(ರಿ), ಕಡವಿನಹೊಸಹಳ್ಳಿ, ಬಾಗೀವಾಳು ಅಂಚೆ, ಹೊಳೆನರಸೀಪುರ | ಹೊಳೆನರಸೀಪುರ |
| 35 | ಡಾ.ಬಿ.ಆರ್.ಅಂಬೇಡ್ಕರ್ ಯುವಕ ಸಂಘ, ಕ್ಯಾತನಹಳ್ಳಿ ಕಾಲೋನಿ, ಹೊಳೆನರಸೀಪುರ | ಹೊಳೆನರಸೀಪುರ |
| 36 | ಕುವೆಂಪು ಯುವ ವಿಕಾಸ ವೇದಿಕೆ, ಮಳಲಿ, ಹಳೇಕೋಟೆ ಹೋಬಳಿ, ಹೊಳೆನರಸೀಪುರ | ಹೊಳೆನರಸೀಪುರ |
| 37 | ಶ್ರೀ.ಸ್ನೇಹ ಸಿಂಚನ ಯುವಜನೇತರ ಸ್ವಯಂ ಸೇವಾ ಸಂಘ(ರಿ), 175, ಗದ್ದೇರಾಮೇಶ್ವರ ಬಡಾವಣೆ, ಚನ್ನರಾಯಪಟ್ಟಣ | ಚನ್ನರಾಯಪಟ್ಟಣ |
| 38 | ಶ್ರೀ.ಕೆಂಪಮ್ಮ ಕಲ್ಲೇಶ್ವರ ಯುವಜನೇತರ ಸಂಘ(ರಿ) ಡಿ.ತುಮಕೂರು, ಹಿರಿಸಾವೆ ಹೋಬಳಿ, ಚನ್ನರಾಯಪಟ್ಟಣ | ಚನ್ನರಾಯಪಟ್ಟಣ |
| 39 | ಶ್ರೀ.ಬಸವೇಶ್ವರ ಯುವಜನ ಸಂಘ, ಉಣ್ಣೇನಹಳ್ಳಿ ಗ್ರಾಮ, ಬೀಚೇನಹಳ್ಳಿ ಅಂಚೆ, ಹೊಳೆನರಸೀಪುರ | ಹೊಳೆನರಸೀಪುರ |
| 40 | ಶ್ರೀರಾಮ ಕಲಾ ವೃಂದ, ಶ್ರೀರಾಮನಗರ, ಹಳೇಕೋಟೆ ಹೋಬಳಿ, ಹೊಳೆನರಸೀಪುರ | ಹೊಳೆನರಸೀಪುರ |
| 41 | ಡಾ.ಬಿ.ಆರ್.ಅಂಬೇಡ್ಕರ್ ಯುವ ಸಾಂಸ್ಕೃತಿಕ ಸಂಘ, ಮಾರನಾಯಕನಹಳ್ಳಿ, ಸಿಂಗಾಪುರ ಅಂಚೆ, ಕಸಬಾ ಹೋಬಳಿ, ಹೊಳೆನರಸೀಪುರ ತಾಲ್ಲೂಕು | ಹೊಳನರಸೀಪುರ |
| 42 | ಶ್ರೀ.ಬಸವೇಶ್ವರ ಯುವಕ ಸಮೂಹ, ಅಗ್ಗುಂದ ಗ್ರಾಮ, ಕಸಬಾ ಹೋಬಳಿ, ಅರಸೀಕೆರೆ | ಅರಸೀಕೆರೆ |
| 43 | ಗಜಾನನ ಯುವತಿ ಮಂಡಳಿ, ದೊಡ್ಡಬೀಕನಹಳ್ಳಿ, ಚನ್ನಂಗೀಹಳ್ಳಿ ಕಟ್ಟಾಯ ಹೋಬಳಿ, ಹಾಸನ | ಹಾಸನ |
| 44 | ಆದರ್ಶ ಯುವಕ ಸಂಘ, ಈಗೂರು ಗ್ರಾಮ ಸಕಲೇಶಪುರ | ಸಕಲೇಶಪುರ |
| 45 | ಶ್ರೀರಾಮ ಯುವಕ ಸಂಘ, ಸಂಕಲೇಹಳ್ಳಿ, ಬೂವನಹಳ್ಳಿ ಕಸಬಾ ಹೋಬಳಿ, ಹಾಸನ | ಹಾಸನ |
| 46 | ಶ್ರೀ.ಶನೇಶ್ವರ ಯುವಕ ಸಂಘ, ಶಂಕರನಹಳ್ಳಿ, ಪುರನಗೆರೆ, ಭಾಣಾವಾರ ಹೋಬಳಿ, ಅರಸೀಕೆರೆ | ಅರಸೀಕೆರೆ |
| 47 | ಕಾಳಮ್ಮ ಯುವತಿ ಮಂಡಳಿ, ಕಿರಗಡಲೂ, ಆಲೂರು | ಆಲೂರು |
| 48 | ಶ್ರೀರಾಮ ಯುವಕ ಸಂಘ, ದೊಡ್ಡಗಾನಹಳ್ಳಿ, ಕಸಬಾ ಹೋಬಳಿ, ಅರಸೀಕೆರೆ | ಅರಸೀಕೆರೆ |
| 49 | ಈಶ್ವರಿ ಯುವತಿ ಮಂಡಳಿ, ಸಂಕೇನಹಳ್ಳಿ, ಬಿ.ಕಾಟೀಹಳ್ಳಿ, ಕಸಬಾ ಹೋಬಳಿ | ಹಾಸನ |
| 50 | ಶ್ರೀ.ಬಾಬು ಜಗಜೀವನರಾಂ ಯುವಕ ಸಂಘ(ರಿ), ತೆವಡಹಳ್ಳಿ ಗ್ರಾಮ, ಮಲ್ಲಪನಹಳ್ಳಿ,ಕಸಬಾ ಹೋಬಳಿ, ಹೊಳೆನರಸೀಪುರ | ಹೊಳೆನರಸೀಪುರ |
| 51 | ಡಾ.ಜೈಭೀಮ್ ಹಾಗೂ ಬಾಬು ಜಗಜೀವನರಾಂ ಯುವಕ ಸಂಘ ಹೊನ್ನೇನಹಳ್ಳಿ, ಆನೆಕನ್ನಂಬಾಡಿ, ಹಳ್ಳಿ ಮೈಸೂರು, ಹೊಳೆನರಸೀಪುರ | ಹೊಳೆನರಸೀಪುರ |
| 52 | ಪವಿತ್ರ ಮಹಿಳಾ ಸಂಘ(ರಿ), ಶ್ರೀರಾಮನಗರ, ಕಟ್ಟೆಬೆಳಗುಲಿ, ಹಳೇಕೋಟೆ, ಹೊಳೆನರಸೀಪುರ | ಹೊಳೆನರಸೀಪುರ |

| | | |
|---|---|---|
| 53 | ಪರಿವರ್ತನ ಯುವಕ ಕಲಾ ಸಂಘ(ರಿ), ಐಚನಹಳ್ಳಿ, ಕಸಬಾ ಹೋಬಳಿ, ಹೊಳೆನರಸೀಪುರ | ಹೊಳೆನರಸೀಪುರ |
| 54 | ಅಂಬೇಡ್ಕರ್ ಯುವಕ ಕಲಾ ಸಂಘ, ಮುಂಡನಹಳ್ಳಿ, ದೊಡ್ಡಬ್ಯಾಗತವಳ್ಳಿ, ಕಸಬಾ ಹೋಬಳಿ, ಹೊಳೆನರಸೀಪುರ | ಹೊಳೆನರಸೀಪುರ |
| 55 | ವಿಶ್ವಬಂದು ಯುವಕ ಸಂಘ, ನಾಗತಿಹಳ್ಳಿ, ಜಾಜೂರು, ಕಸಬಾ ಹೋಬಳಿ, ಅರಸೀಕೆರೆ | ಅರಸೀಕೆರೆ |
| 56 | ಜೈಭೀಮ್ ಯುವ ಸಾಂಸ್ಕೃತಿಕ ಸಂಘ, ಮಲ್ಲಪನಹಳ್ಳಿ, ಕಸಬಾ ಹೋಬಳಿ, ಹೊಳೆನರಸೀಪುರ | ಹೊಳೆನರಸೀಪುರ |
| 57 | ಶ್ರೀರಾಜೇಶ್ವರಿ ಮಹಿಳಾ ಯುವತಿ ಮಂಡಳಿ, ಸುಭಾಷ್‌ನಗರ, ಅರಸೀಕೆರೆ | ಅರಸೀಕೆರೆ |
| 58 | ಕಲ್ಪಿತ ಜನಜಾಗೃತಿ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಸಂಸ್ಥೆ, ಕಟ್ಟೆಬೆಳಗುಲಿ, ಹಳೇಕೋಟೆ, ಹೊಳೆನರಸಸೀಪುರ | ಹೊಳೆನರಸೀಪುರ |
| 59 | ಶ್ರೀವೀರಾಂಜನೇಯ ಯುವಜನೇತರ ಸಂಘ, ಮೇಗಲಕೇರಿ, ಕಸಬಾ ಹೋಬಳಿ, ಚನ್ನರಾಯಪಟ್ಟಣ | ಚನ್ನರಾಯಪಟ್ಟಣ |
| 60 | ಸಿ.ವಿ.ಕೆ.ಎಲ್.ಸ್ವಯಂ ಸೇವಾ ಸಂಸ್ಥೆ, ಮೇಗಲಕೇರಿ ಕಸಬಾ ಹೋಬಳಿ, ಚನ್ನರಾಯಪಟ್ಟಣ | ಚನ್ನರಾಯಪಟ್ಟಣ |
| 61 | ಶ್ರೀನಿವಾಸ ಯುವಕ ಸಂಘ, ಚನ್ನರಾಯಪಟ್ಟಣ | ಚನ್ನರಾಯಪಟ್ಟಣ |
| 62 | ಕಾವೇರಿ ಯುವಕ ಸಂಘ(ರಿ), ಕೊಣನೂರು, ಕೊಣನೂರು ಹೋಬಳಿ, ಅರಕಲಗೂಡು | ಅರಕಲಗೂಡು |
| 63 | ಡಾ.ಬಾಬುಜಗಜೀವನರಾಂ ಯುವಕ ಸಂಘ, ಹಾರನಹಳ್ಳಿ, ಕಸಬಾ ಹೊಬಳಿ, ಅರಸೀಕೆರೆ | ಅರಸೀಕೆರೆ |
| 64 | ಒನಕೆ ಓಬವ್ವ ಯುವತಿ ಮಂಡಳಿ, ಯಡೆಹಳ್ಳಿ, ಬಾಗೆ, ಬೆಳಗೋಡು, ಸಕಲೇಶಪುರ | ಸಕಲೇಶಪುರ |
| 65 | ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಸಂಘ, ಮಳಲಿ, ಕಸಬಾ ಹೋಬಳಿ, ಸಕಲೇಶಪುರ | ಸಕಲೇಶಪುರ |
| 66 | ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಸಂಘ, ಅರೇಹಳ್ಳಿ ಗ್ರಾಮ, ಬೇಲೂರು | ಬೇಲೂರು |
| 67 | ಕನಕದಾಸ ಯುವ ಕಲಾ ಸಂಘ, ತೆವಡಹಳ್ಳಿ, ಮಲ್ಲಪ್ಪನಹಳ್ಳಿ ಹೋಬಳಿ, ಹೊಳೆನರಸೀಪುರ | ಹೊಳೆನರಸೀಪುರ |
| 68 | ಶ್ರೀ.ಮಹೇಶ್ವರಿ ಯುವತಿ ಮಂಡಳಿ, ಅರಕಲಗೂಡು | ಅರಕಲಗೂಡು |
| 69 | ಕರ್ನಾಟಕ ಜೈಭೀಮ್ ಯುವಕ ಸಂಘ, ಇರಕರವಳ್ಳಿ, ಲಕ್ಕುಂದ, ಬಿಕ್ಕೋಡು ಹೋಬಳಿ, ಬೇಲೂರು | ಬೇಲೂರು |
| 70 | ಶ್ರೀ.ಚನ್ನಕೇಶವ ಯುವಕ ಸಂಘ, ದಿಂಡಗೂರು, ಕಸಬಾ ಹೋಬಳಿ, ಚನ್ನರಾಯಪಟ್ಟಣ | ಚನ್ನರಾಯಪಟ್ಟಣ |
| 71 | ಶ್ರೀ.ಮಾರುತಿ ಯುವಕ ಸಂಘ, ಅರಸೀಹಳ್ಳಿ, ಅಟ್ಟಾವರ ಹೊಸಹಳ್ಳಿ, ದುದ್ದ ಹೋಬಳಿ, ಹಾಸನ | ಹಾಸನ |
| 72 | ಕೀರ್ತೀ ಯುವಕ ಸಂಘ, ಕಡವಿನಹೊಸಹಳ್ಳಿ, ಬಾಗೀವಾಳು, ಹಳೇಕೋಟೆ, ಹೊಳೆನರಸೀಪುರ | ಹೊಳೆನರಸೀಪುರ |
| 73 | ಶ್ರೀರಾಮ ಕ್ರೀಡಾ ಕಲಾ ಯುವಕ ಸಂಘ, ಸೊಪ್ಪಿನಹಳ್ಳಿ, ಯಲಗುಂದ ಸಾಲಗಾಮೆ, ಹಾಸನ | ಹಾಸನ |
| 74 | ಶ್ರೀ.ಮುಕ್ಕಣೇಶ್ವರಿ ಯುವತಿ ಮಂಡಳಿ(ರಿ) ರಾಂಪುರ, ಕಣಕಟ್ಟೆ ಹೋಬಳಿ, ಅರಸೀಕೆರೆ | ಅರಸೀಕೆರೆ |
| 75 | ಶ್ರೀ.ನಿರ್ವಾಣ ಸಿದ್ದೇಶ್ವರ ಯುವಜನೇತರ ಸಂಘ. ಶ್ರೀರಾಂಪುರ, ಕಣಕಟ್ಟೆ ಹೋಬಳಿ, ಅರಸಿಕೆರೆ | ಅರಸೀಕೆರೆ |
| 76 | ಶ್ರೀಧ್ವನಿ ಮಹಿಳಾ ವಿವಿದ್ದೋದ್ದೇಶ ಮಂಡಳಿ, ಎಲ್.ಐ.ಜಿ–116, ಹೌಸಿಂಗ್ ಬೋರ್ಡ್, ಹೊಳೆನರಸೀಪುರ | ಹೊಳೆನರಸೀಪುರ |
| 77 | ಅರಕಲಗೂಡು ಯೂತ್ ವಾಲಿಬಾಲ್ ಅಸೋಸಿಯೇಷನ್(ರಿ), ಕಸಬಾ ಹೋಬಳಿ ಅರಕಲಗೂಡು | ಅರಕಲಗೂಡು |
| 78 | ಡಾ.ಬಿ.ಆರ್.ಅಂಬೇಡ್ಕರ್ ಗ್ರಾಮೀಣಾಭಿವೃದ್ಧಿ ಸೇವಾ ಸಂಸ್ಥೆ, ಶೆಟ್ಟಿಹಳ್ಳಿ, ಕಟ್ಟಾಯ ಹೋಬಳಿ, ಹಾಸನ | ಹಾಸನ |
| 79 | ಶ್ರೀ.ಕುಮಾರಲಿಂಗೇಶ್ವರ ಸ್ವಾಮಿ ಕ್ರೀಡಾಕೂಟ ಸಮಿತಿ, ವನಗೂರು ಗ್ರಾಮ, ಸಕಲೇಶಪುರ | ಸಕಲೇಶಪುರ |

| | | |
|---|---|---|
| 80 | ಡಾ.ಬಿ.ಆರ್.ಅಂಬೇಡ್ಕರ್ ಸಂಘ, ದೊಡ್ಡಬ್ಯಾಗತವಳ್ಳಿ, ಕಸಬಾ ಹೋಬಳಿ,ಹೊಳೆನರಸೀಪುರ | ಹೊಳೆನರಸೀಪುರ |
| 81 | ಬೌದ್ಧ ಮೈತ್ರಿ ಬಳಗ, ಆಲೂರು | ಆಲೂರು |
| 82 | ವಿವೇಕಾನಂದ ಯುವಕರ ಸಂಘ, ರವೀಂದ್ರನಗರ, ಹಾಸನ | ಹಾಸನ |
| 83 | ಕುವೆಂಪು ಯುವಕ ಸಂಘಬೈರಾಪುರ, ಆಲೂರು | ಆಲೂರು |
| 84 | ಹಾಸನಾಂಬ ಜಾನಪದ ಕಲಾ ತಂಡ, ಹಾಸನ | ಹಾಸನ |
| 85 | ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ನಿರ್ಮಾ ಸಮಿತಿ, ಹೆತ್ತೂರು ಗ್ರಾಮ, ಸಕಲೇಶಪುರ | ಸಕಲೇಶಪುರ |
| 86 | ಜೈಭೀಮ್ ಯುವಕ ಸಂಘ, ಜೈಭೀಮ್ ನಗರ, ಅರಕಲಗೂಡು | ಅರಕಲಗೂಡು |
| 87 | ಮಹಿಳಾ ಜಾಗೃತಿ ಮಾರ್ಗದರ್ಶಿ ಅಸೋಸಿಯೇಟ್ಸ್, ಸಕಲೇಶಪುರ | ಸಕಲೇಶಪುರ |
| 88 | ಬೌದ್ಧ ಮೈತ್ರಿ ಬಳಗ, ಸಕಲೇಶಪುರ | ಸಕಲೇಶಪುರ |
| 89 | ತಲ್ಲೂಕು ಸವಿತಾ ಸಮಾಜ, ಸಕಲೇಶಪುರ | ಸಕಲೇಶಪುರ |
| 90 | ಶ್ರೀವಿನಾಯಕ ಕುಂಬಾರ ಸಂಘ, ಕಬ್ಬಿನಗದ್ದೆ ಗ್ರಾಮ | ಸಕಲೇಶಪುರ |
| 91 | ಡಾ.ಬಿಆರ್.ಅಂಬೇಡ್ಕರ್ ಯುವಕರ ಸಂಘ, ಹೊನ್ನವಳ್ಳಿ ಗ್ರಾಮ ಆಲೂರು | ಆಲೂರು |
| 92 | ಶ್ರೀ.ಚೌಡೇಶ್ವಿ ಯುವಕರ ಸಂಘ ಪ್ರೇಮನಗರ ಸಕಲೇಶಪುರ | ಸಕಲೇಶಪುರ |
| 93 | ಶ್ರೀ.ಅಶ್ವಥ್‌ನಾರಾಯಣ ಯುವಕ ಸಂಘ, ಬೋಗಾರಹಳ್ಳಿಕೊಪ್ಪಲು, ಕುದುರುಗುಂಡಿ ಅಂಚೆ, ಹಾಸನ | ಹಾಸನ |
| 94 | ಅಮೂಲ್ಯ ಯುವತಿ ಕಲಾ ಮಂಡಳಿ, ಕಟ್ಟೆಬೆಳಗುಲಿ, ಹೊಳೆನರಸೀಪುರ | ಹೊಳೆನರಸೀಪುರ |
| 95 | ಡಾ.ಬಿ.ಆರ್.ಅಂಬೇಡ್ಕರ್ ಯುವಕ ಸಂಘ (ರಿ), ಲಕ್ಷ್ಮೀಪುರ ದೊಡ್ಡಮಗ್ಗೆ ಮತ್ತು ಹೋಬಳಿ, ಅರಕಲಗೂಡು | ಅರಕಲಗೂಡು |
| 96 | ಡಾ.ಅಂಬೇಡ್ಕರ್ ಯುವಕ ಸಂಘ, ಅಮಬೇಡ್ಕರ್ ನಗರ, ಜೋಡಿಗುಬ್ಬಿ ಹೊಳೆನರಸೀಪುರ | ಹೊಳೆನರಸೀಪುರ |
| 97 | ಶ್ರೀ.ಬೈರವೇಶ್ವರ ಯುವ ಕಲಾ ಸಂಘ, ಮಾರಶೆಟ್ಟಿಹಳ್ಳಿ, ಕೋಡಿಹಳ್ಳಿ, ಹೊಳೆನರಸೀಪುರ | ಹೊಳೆನರಸೀಪುರ |
| 98 | ಅಂಬೇಡ್ಕರ್ ಯುವಕರ ಸಂಘ, ಐಚನಹಳ್ಳಿ, ಕಸಬಾ ಹೋಬಳಿ, ಹೊಳೆನರಸೀಪುರ | ಹೊಳೆನರಸೀಪುರ |
| 99 | ಡಾ.ಅಂಬೇಡ್ಕರ್ ಯುವಕ ಸಂಘ, ದುಮ್ಮಿ, ಅರಕಲಗೂಡು | ಅರಕಲಗೂಡು |
| 100 | ಸ್ಟೇಡಿಯಂ ಬಾಯ್ಸ್, ವಾಲಿಬಾಲ್ ಕ್ಲಬ್, ಹಾಸನ | ಹಾಸನ |

ಅನುಬಂಧ- 03

ಹಾಸನ ಜಿಲ್ಲೆಯಲ್ಲಿರುವ ವಿವಿಧ ಕ್ರೀಡಾಂಗಣಗಳ ಪೂರ್ಣ ಮಾಹಿತಿ ಹಾಗೂ ಈ ಕ್ರೀಡಾಂಗಣಗಳ ಅಭಿವೃದ್ಧಿಗಾಗಿ ಕೈಗೊಂಡಿರುವ ಕ್ರಮಗಳ ವಿವರ

| ಕ್ರಮ ಸಂಖ್ಯೆ | ತಾಲ್ಲೂಕು/ ಜಿಲ್ಲಾ ಕ್ರೀಡಾಂಗಣದ ವಿವರ | ನಿವೇಶನದ ವಿಸ್ತೀರ್ಣ | ಸರ್ವೆ ನಂ | ಲಭ್ಯ ಸೌಲಭ್ಯಗಳು |
|---|---|---|---|---|
| 01 | ಹಾಸನ ಜಿಲ್ಲಾ ಕ್ರೀಡಾಂಗಣ ಮತ್ತು ಹಾಸನ ಒಳಾಂಗಣ ಕ್ರೀಡಾಂಗಣ | 32 ಎಕರೆ | 73, 118, 355,394, 296 298, 299, 401, 402, 464 | 1996 ರಿಂದ ಕ್ರೀಡಾಂಗಣವನ್ನು ಸಾರ್ವಜನಿಕರ ಉಪಯೋಗಕ್ಕೆ ನೀಡಲಾಗಿದ್ದು, ಈ ಕ್ರೀಡಾಂಗಣದಲ್ಲಿರುವ ಸೌಲಭ್ಯಗಳು:<br>• 400 ಮೀಟರ್ ಸಿಂಡರ್ ಟ್ರ್ಯಾಕ್, ಹಾಕಿ ಮೈದಾನ, ಕಾಲ್ಚೆಂಡು ಮೈದಾನ, ವಾಲಿಬಾಲ್ ಅಂಕಣ- ಫ್ಲಡ್‌ಲೈಟ್‌ನೊಂದಿಗೆ, ಬಾಸ್ಕೆಟ್‌ಬಾಲ್ ಸಿಮೆಂಟ್ ಅಂಕಣ, ಖೋಖೋ ಅಂಕಣ, ಕಬಡ್ಡಿ ಅಂಕಣ, ಹ್ಯಾಂಡ್‌ಬಾಲ್ ಅಂಕಣ, ಕ್ರಿಕೆಟ್ ಮೈದಾನ, ಬಾಲ್-ಬ್ಯಾಡ್‌ಮಿಂಟನ್ ಅಂಕಣ, ಕ್ರೀಡಾ ವಸತಿ ನಿಲಯ ಕಟ್ಟಡ, ಲಾನ್ ಟೆನ್ನಿಸ್, ಸ್ಕೇಟಿಂಗ್, ಒಳಾಂಗಣ ಈಜುಕೊಳ, ಮರದ ನೆಲಹಾಸುಳ್ಳ ಬಾಸ್ಕೆಟ್‌ಬಾಲ್, ಬ್ಯಾಡ್ಮಿಂಟನ್, ವಾಲಿಬಾಲ್ ಅಂಕಣ, ಸ್ಕ್ವಾಷ್ ಕೋರ್ಟ್, ಟಿ.ಟಿ ಅಂಕಣ.<br>• ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ ಅಳವಡಿಸಲು ಕೇಂದ್ರ ಸರ್ಕಾರದಿಂದ ರೂ 700.00 ಲಕ್ಷ ಮಂಜೂರಾಗಿದ್ದು, ರೂ 300.00 ಲಕ್ಷ ಬಿಡುಗಡೆಯಾಗಿದ್ದು, ಕಾಮಗಾರಿ ಆರಂಭಗೊಳ್ಳಬೇಕಾಗಿರುತ್ತದೆ. |
| 02. | ಅರಕಲಗೂಡು ತಾಲ್ಲೂಕು ಕ್ರೀಡಾಂಗಣ | 10.8 ಎಕರೆ | 136 ಕಸಬಾ ಗ್ರಾಮ | 2010 ರಿಂದ ಕ್ರೀಡಾಂಗಣವನ್ನು ಸಾರ್ವಜನಿಕರ ಉಪಯೋಗಕ್ಕೆ ನೀಡಲಾಗಿದ್ದು, ಪುನ: ಈ ಕ್ರೀಡಾಂಗಣದ ಹೆಚ್ಚುವರಿ ಕಾಮಗಾರಿ ಗಳಾದ, ನೆಲಸಮತಟ್ಟು, ಡ್ರೈನೇಜ್, ಕಾಮಗಾರಿ ಮತ್ತು ಆಟದ ಅಂಕಣಗಳ ನಿರ್ಮಾಣ ಪ್ರಗತಿಯಲ್ಲಿದೆ. |
| 03. | ಆಲೂರು ತಾಲ್ಲೂಕು ಕ್ರೀಡಾಂಗಣ | 06 ಎಕರೆ | 92ನೇರಲಕೆರೆ | 2010 ರಿಂದ ಕ್ರೀಡಾಂಗಣವನ್ನು ಸಾರ್ವಜನಿಕರ ಉಪಯೋಗಕ್ಕೆ ನೀಡಲಾಗಿದ್ದು, ಈ ಕ್ರೀಡಾಂಗಣದಲ್ಲಿ ಇರುವ ಸೌಲಭ್ಯಗಳು 200 ಮೀಟರ್ ಟ್ರ್ಯಾಕ್, ವಾಲಿಬಾಲ್, ಖೋಖೋ, ಕಬಡ್ಡಿ, ಕ್ರಿಕೆಟ್ ಮೈದಾನ ಪೆವಿಲಿಯನ್ ಕಟ್ಟಡ, ಜಿಮ್ ಕೊಠಡಿ ಒಳಗೊಂಡಿರುತ್ತದೆ. |
| 04 | ಬೇಲೂರು ತಾಲ್ಲೂಕು ಕ್ರೀಡಾಂಗಣ | 8.542 ಎಕರೆ | 12 ಮತ್ತು 13 ಅತ್ತಲಗೆರೆ | 2012ರಲ್ಲಿ ಸಾರ್ವಜನಿಕರ ಉಪಯೋಗಕ್ಕೆ ನೀಡಿದ್ದು, ಈ ಕ್ರೀಡಾಂಗಣದಲ್ಲಿ ಇರುವ ಸೌಲಭ್ಯಗಳು 400 ಮೀಟರ್ ಟ್ರ್ಯಾಕ್, ವಾಲಿಬಾಲ್, ಖೋಖೋ, ಕಬಡ್ಡಿ, ಜಿಮ್ |

| | | | | |
|---|---|---|---|---|
| | | | | ಕೊಠಡಿ ಇದ್ದು, ಇನ್ನೂ ಹೆಚ್ಚುವರಿ ಕಾಮಗಾರಿಗಳಾದ, ಸಂಪರ್ಕ ರಸ್ತೆ ಮತ್ತು ಆವರಣ ಗೋಡೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. |
| 05 | ಸಕಲೇಶಪುರ ತಾಲ್ಲೂಕು ಕ್ರೀಡಾಂಗಣ | 7.00 ಎಕರೆ | 11, 113, 80–1, 80–2, 17/7,17 ಬಿ, 80–1ಬಿ,80–11 ಸುಭಾಷ್ ನಗರ | 1998 ರಲ್ಲಿ ಕ್ರೀಡಾಂಗಣ ಸಾರ್ವಜನಿಕ ಉಪಯೋಗಕ್ಕೆ ನೀಡಲಾಗಿದೆ. ಈ ಕ್ರೀಡಾಂಗಣದಲ್ಲಿ ಇರುವ ಸೌಲಭ್ಯಗಳು 200 ಮೀಟರ್ ಟ್ರ್ಯಾಕ್, ವಾಲಿಬಾಲ್, ಖೋಖೋ, ಕಬಡ್ಡಿ, ಕ್ರಿಕೆಟ್ ಮೈದಾನ ಪೆವಿಲಿಯನ್ ಕಟ್ಟಡ, ಜಿಮ್ ಕೊಠಡಿ ಇದ್ದು, ಕಾಂಪೌಂಡ್ ನಿರ್ಮಾಣ ಮತ್ತು ಶೌಚಾಲಯ ನಿರ್ಮಾಣ, ಸಂಪರ್ಕ ರಸ್ತೆ ಕಾಮಗಾರಿಗೆ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. |
| 06 | ಅರಸೀಕೆರೆ ತಾಲ್ಲೂಕು ಕ್ರೀಡಾಂಗಣ | 8.25 ಎಕರೆ | 38, 42–3, 41,42, 40 ಗೂಂಡಕಾನಹಳ್ಳಿ | 1998 ರಲ್ಲಿ ಕ್ರೀಡಾಂಗಣ ಸಾರ್ವಜನಿಕ ಉಪಯೋಗಕ್ಕೆ ನೀಡಲಾಗಿದೆ. ಈ ಕ್ರೀಡಾಂಗಣದಲ್ಲಿ ಇರುವ ಸೌಲಭ್ಯಗಳು 400 ಮೀಟರ್ ಟ್ರ್ಯಾಕ್, ವಾಲಿಬಾಲ್, ಖೋಖೋ, ಕಬಡ್ಡಿ, ಜಿಮ್ ಕೊಠಡಿ, ಆವರಣ ಗೋಡೆ ಮತ್ತು ಫೆನ್ಸಿಂಗ್ ನಿರ್ಮಾಣ ಮಾಡಲಾಗಿದೆ. |
| 07 | ಜಾವಗಲ್ ಹೋಬಳಿ ಕ್ರೀಡಾಂಗಣ | 2.00 ಎಕರೆ | 89, 90, 91 | ಹಾಲಿ ನಿವೇಶನದಲ್ಲಿ 2000 ರಲ್ಲಿ ಪೆವಿಲಿಯನ್ ಕಟ್ಟಡ ಮಾತ್ರ ನಿರ್ಮಿಸಲಾಗಿದ್ದು, ಕ್ರೀಡಾಂಗಣ. ಬಳಕೆಯಲ್ಲಿದೆ. |
| 08 | ಹೊಳೆನರಸೀಪುರ ತಾಲ್ಲೂಕು ಕ್ರೀಡಾಂಗಣ | 10.3 ಎಕರೆ | 229 ಹೊಳೆನರಸೀಪುರ ಟೌನ್ | 1998 ರಲ್ಲಿ ಕ್ರೀಡಾಂಗಣ ಸಾರ್ವಜನಿಕ ಉಪಯೋಗಕ್ಕೆ ನೀಡಲಾಗಿದೆ. ಈ ಕ್ರೀಡಾಂಗಣದಲ್ಲಿ ಇರುವ ಸೌಲಭ್ಯಗಳು 400 ಮೀಟರ್ ಟ್ರ್ಯಾಕ್, ವಾಲಿಬಾಲ್, ಖೋಖೋ, ಕಬಡ್ಡಿ, ಜಿಮ್ ಕೊಠಡಿ ಇದೆ. ಪ್ರಸ್ತುತ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಮಾಡಲು ಅನುಮೋದನೆ ನೀಡಿದ್ದು, ಕಾಮಗಾರಿ ಪ್ರಾರಂಭ ಆಗಬೇಕಾಗಿದೆ. |
| 09 | ಚನ್ನರಾಯಪಟ್ಟಣ ತಾಲ್ಲೂಕು ಕ್ರೀಡಾಂಗಣ | 7.00 ಎಕರೆ | 28–3, 29–2, 29–1ವೈ, 29–3, 29–4,30ವೈ, 8ವೈ, 59ವೈ, 31–5ವೈ ಕೆರೆಚಿಕ್ಕನಹಳ್ಳಿ ಮತ್ತುಗೊರವನಹಳ್ಳಿ | 1998 ರಲ್ಲಿ ಕ್ರೀಡಾಂಗಣ ಸಾರ್ವಜನಿಕ ಉಪಯೋಗಕ್ಕೆ ನೀಡಲಾಗಿದೆ. ಈ ಕ್ರೀಡಾಂಗಣದಲ್ಲಿ ಇರುವ ಸೌಲಭ್ಯಗಳು 400 ಮೀಟರ್ ಟ್ರ್ಯಾಕ್, ವಾಲಿಬಾಲ್, ಖೋಖೋ, ಕಬಡಡಿ, ಪೆವಿಲಿಯನ್ ಕಟ್ಟಡ, ಜಿಮ್ ಕೊಠಡಿ ಮತ್ತು ಸಲಕರಣೆ ಒಳಗೊಂಡಿದ್ದು, ಹೆಚ್ಚುವರಿ ಕಾಮಗಾರಿಗಾಗಿ ಪುರಸಭೆಯಿಂದ ರೂ 100.00 ಲಕ್ಷದಲ್ಲಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಇಲಾಖೆಯಿಂದ ಆಟದ ಮೈದಾನ ನಿರ್ಮಿಸಲು ರೂ 32.00 ಲಕ್ಷ ಬಿಡುಗಡೆ ಆಗಿರುತ್ತದೆ. |

—x—x—